ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 40 | ಸೆಪ್ಟೆಂಬರ್ 30, 1984 | ಬೆಲೆ 60 ಪೈಸೆ.

ಕರ್ನಾಟಕದ ಪ್ರಸಕ್ತ ರಾಜಕೀಯ ಪರಿಸ್ಥಿತಿಯ ಕುರಿತು

ಸೆಪ್ಟೆಂಬರ್ 12-13 ರಂದು ನಡೆದ ಪಕ್ಷದ ರಾಜ್ಯ ಸಮಿತಿ ಸಭೆಯ ನಿರ್ಣಯ

ಕರ್ನಾಟಕದಲ್ಲಿ ಕಾಂಗ್ರೆಸ್ಸೇತರ ಜನತಾ ಪಕ್ಷದ ಸರಕಾರವು ಅಸ್ತಿತ್ವದಲ್ಲಿರುವುದರಿಂದ ದೇಶದ ರಾಜಕೀಯದಲ್ಲಿ ಉಂಟಾಗುವ ಬದಲಾವಣೆಗಳು ಕರ್ನಾಟಕದಲ್ಲಿ ತೀವ್ರ ಪರಿಣಾಮವನ್ನುಂಟು ಮಾಡುತ್ತವೆ. ಆದರಲ್ಲಿಯೂ ಕಾಶ್ಮೀರದಲ್ಲಿ ಜುಲೈ 3 ರಂದು ಡಾ|| ಫರೂಕ್ ಅಬ್ದುಲ್ಲಾ ರವರ ನ್ಯಾಷನಲ್ ಕಾನ್‌ಫರೆನ್ಸ್‌ನ ಮಂತ್ರಿಮಂಡಳವನ್ನು ಸಂವಿಧಾನ ವಿರೋಧವಾಗಿ ವಜಾ ಮಾಡಿದಾಗ ಕೋಪ ರಾಜ್ಯಾದ್ಯಂತ ಉಂಟಾಯಿತು; ಮಾತ್ರವಲ್ಲ ಸಂವಿಧಾನಬಾಹಿರವಾಗಿ ಕಾಂಗ್ರೆಸ್ಸೇತರ ಸರಕಾರವನ್ನು ಉರುಳಿಸುವ ಹಂಚಿಕೆಗೆ ಕರ್ನಾಟಕ ಬಲಿಯಾಗಬಹುದು ಎಂಬ ಶಂಕೆ ಬಲವಾಗಿ ಹರಡಿತು.

ಇದರಲ್ಲಿ ತುಂಬಾ ವಾಸ್ತವಾಂಶವೂ ಇದೆ. ಚುನಾವಣೆಯ ಮೊದಲು ಎಲ್ಲಾ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ರಾಜ್ಯ ಅಥವಾ ಅಧ್ಯಕ್ಷರ ಆಡಳಿತ ಸ್ಥಾಪಿಸದಿದ್ದರೆ ತಮಗೆ ಬಹುಮತ ದೊರೆಯಲಾರದು ಎಂಬ ಬಲವಾದ ಅನುಮಾನ ಕಾಂಗ್ರೆಸ್ (ಐ) ಹೈಕಮಾಂಡ್‌ಗೆ ಉಂಟಾಗಿದೆ.

ರಾಮಕೃಷ್ಣ ಹೆಗ್ಗಡೆಯವರು ಇತರ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳ ಜೊತೆ ಸೇರಿ ಎನ್. ಡಿ. ಸಿ. ಸಭೆಯಿಂದ ಕಾಶ್ಮೀರದ ಸಂವಿಧಾನ ವಿರೋಧಿ ವರ್ತನೆಯನ್ನು ಖಂಡಿಸಿ ಹೊರ ನಡೆದದ್ದು ಅತ್ಯಂತ ಸ್ವಾಗತಾರ್ಹ. ಕಾಂಗ್ರೆಸ್ (ಐ)ಯುಮತ್ತು ಕೆಲವು ಪತ್ರಿಕೆಗಳ ಟೀಕೆ ಈ ವಿಷಯದಲ್ಲಿ ಅರ್ಥಹೀನವಾಗಿದೆ.

ಇದೇ ವೇಳೆಯಲ್ಲಿ ಕಳೆದ ಕೆಲವು ತಿಂಗಳುಗಳಿಂದ ಜನತಾ ಪಕ್ಷದೊಳಗೆ ಮೂರು ಗುಂಪುಗಳು ತೀವ್ರ ಘರ್ಷಣೆ ಮಾಡುವ ಸ್ಥಿತಿಗೆ ಮುಟ್ಟಿವೆ ಎಂಬುವುದಂತು ಸತ್ಯ. ಹಿಂದಿನ ಸಮಾಜವಾದಿಗಳ ಗುಂಪು ಹಿಂದಿನ ಕ್ರಾಂತಿರಂಗದ ಗುಂಪು ಮತ್ತು ಹಿಂದಿನ ಜನತಾಪಕ್ಷದ ಗುಂಪು ಈ ಘರ್ಷಣೆಯಲ್ಲಿ ತೊಡಗಿವೆ. ರಾಮಕೃಷ್ಣ ಹೆಗ್ಗಡೆಯವರ ಸರ್ಕಾರದಲ್ಲಿ ಕ್ರಾಂತಿರಂಗದವರೇ ಹೆಚ್ಚು ಮಂತ್ರಿಗಳು ಎಂದು ಜನತಾದವರ ಬೊಬ್ಬೆ. ನಮ್ಮನ್ನು ತೀರಾ ಕಡೆಗಣಿಸಲಾಗಿದೆ ಎಂದು ಸಮಾಜವಾದಿಗಳ ಕೂಗು. ಮೊದಮೊದಲು ಟೀಕೆ, ಅತೃಪ್ತಿ, ಅಸಮಾಧಾನಗಳು ಪಕ್ಷದ ಒಳಗೊಳಗೇ ಹೊಗೆಯಾಡುತ್ತಿದ್ದುದು ಇದೀಗ ಸಂಪುಟ ಪುನರ್ರಚನೆಯ ಸಮಯದಲ್ಲಿ ಪಕ್ಷದ ಅಧ್ಯಕ್ಷ ಸ್ಥಾನದ ಆಯ್ಕೆಯ ಸಂದರ್ಭದಲ್ಲಿ ಹೊರಗೆ ಬಂದಿವೆ. ಬಹಿರಂಗವಾಗಿ ಎಳೆದಾಟಗಳು ನಡೆಯುತ್ತಿವೆ.

ಮುಖ್ಯವಾಗಿ ಹಿಂದಿನ ದೇವರಾಜ ಅರಸರವರ ಕಾಲದವರೆಗೆ [ಅದು ಪಕ್ಷಾಂತರಿಗಳ ಬೆಂಬಲದಿಂದ ಆಳಿದ ಗುಂಡೂರಾವರ ಕಾಲದಲ್ಲೂ ಇತ್ತು] ರಾಜ್ಯದಲ್ಲಿ ಎರಡು ಮುಖ್ಯ ಕೋಮುಗಳ—ಲಿಂಗಾಯಿತರ ಮತ್ತು ಒಕ್ಕಲಿಗರ ಮೇಲುಗೈಯಿರಲಿಲ್ಲ. ಇತರ ಎಲ್ಲ ಸಣ್ಣಪುಟ್ಟ ಹಿಂದುಳಿದ ವಿಭಾಗಗಳ ಬೆಂಬಲದಿಂದ ಮುಖ್ಯವಾಗಿ ಅವರ ಸರ್ಕಾರವು ನಡೆಯುತ್ತಿತ್ತು. ಎಂ. ಎಲ್. ಎ. ಗಳು ಆ ರೀತಿ ವಿಭಜಿಸಲ್ಪಟ್ಟಿದ್ದರು. ಹೆಗ್ಡೆಯವರಿಗೆಬೆಂಬಲ ಕೊಡುವ ಶಾಸಕರಲ್ಲಿ ಅಧಿಕ ಸಂಖ್ಯೆಯಲ್ಲಿರುವವರು ಲಿಂಗಾಯಿತರು ಮತ್ತು ಒಕ್ಕಲಿಗರು. ಬ್ರಾಹ್ಮಣರೂ ಸೇರಿದರೆ ಶೇಕಡ 60 ಸ್ಥಾನಗಳನ್ನು ಶೇಕಡ 35 ಜನಸಂಖ್ಯೆಯಿರುವ ಈ ಮೇಲು ಜಾತಿಗಳು ಗಳಿಸಿಕೊಂಡಿವೆ. ಆದಕಾರಣ, ಹೆಗ್ಗಡೆಯವರ ಮೇಲೆ ಈ ಕೋಮುಗಳ ಸ್ಥಾಪಿತ ಹಿತಾಸಕ್ತಿಗಳು ಶ್ರೀ ಬೊಮ್ಮಾಯಿ ಮತ್ತು ಶ್ರೀ ದೇವೇಗೌಡರ ಮೂಲಕ ಒತ್ತಡ ತರುತ್ತಿವೆ ಎಂಬ ಪ್ರಚಾರ, ಆ ಮೂಲಕ ಹಿಂದುಳಿದ ಕೋಮುಗಳ ಮತ್ತು ಅಲ್ಪಸಂಖ್ಯಾತರ ಹಿತಗಳು ಕಡೆಗಣಿಸಲ್ಪಟ್ಟಿವೆ ಎಂಬ ಕೂಗು ಕೇಳಿಬರುತ್ತಿತ್ತು.

ಸರ್ಕಾರದ ಮಂತ್ರಿಮಂಡಲದಲ್ಲಿದ್ದ ಶ್ರೀಮತಿ ಚಂದ್ರಪ್ರಭಾ ಅರಸು ಮತ್ತು ಶ್ರೀಮಾನ್ ಅಜೀಜ್ ಸೇಠರು ಆಗಾಗ್ಗೆ ಬಹಿರಂಗವಾಗಿ ತಮ್ಮ ಸರ್ಕಾರವನ್ನು ಟೀಕಿಸುತ್ತಿದ್ದರು. ಸರಕಾರವು ಅಂಗೀಕರಿಸಿದ ಮಸೂದೆಗಳನ್ನು ಬಹಿರಂಗವಾಗಿ ಟೀಕಿಸಿ ವಿರೋಧಪಕ್ಷದವರೊಡನೆ ಕೂಡಿ ವರ್ತಿಸುವ ಮಟ್ಟಕ್ಕೆ ಅಜೀಜ್ ಸೇಠ್ ರಂತಹವರು ಹೋಗಿದ್ದರೆಂಬುದು ಎಲ್ಲರಿಗೂ ತಿಳಿದ ವಿಷಯ. ಇವರಿಬ್ಬರೂ ಕಾಂಗ್ರೈ ಮತ್ತು ಕ್ರಾಂತಿರಂಗದ ಮುಖಂಡರ ಜೊತೆ ರಹಸ್ಯವಾಗಿ ಸಂಪರ್ಕವಿರಿಸುತ್ತಿದ್ದರು ಎಂಬುದು ಜನಜನಿತವಾಗಿದ್ದ ವಿಷಯ.

ಈ ಎಲ್ಲಾ ಅಸಮಾಧಾನಕ್ಕೆ ಉತ್ತರರೂಪವಾಗಿ ಎಂಬಂತೆ ನಾನು ನನ್ನ ಮಂತ್ರಿಮಂಡಲವನ್ನು ವಿಸ್ತರಿಸುತ್ತೇನೆ ಎಂದು ಪದೇಪದೇ ಹೇಳುತ್ತಿದ್ದರೂ ಸಂಪುಟವನ್ನು ವಿಸ್ತರಿಸಲು ಅವರಿಗೆ ಸಾಧ್ಯವಾಗಲಿಲ್ಲ. ವಿಸ್ತರಣೆಯನ್ನು ಅನೇಕ ತಿಂಗಳುಗಳ ಕಾಲ ಮುಂದಕ್ಕೆ ಹಾಕುತ್ತಾ ಬಂದರು. ಕಾರಣ ಪಕ್ಷದೊಳಗಿನ ಬಿಕ್ಕಟ್ಟು ವಿವಿಧ ಬಣಗಳಿಗೆ ಕೇವೊಮ್ಮೆ ಒಬೊಬ್ಬ ಶಾಸಕನನ್ನೂ ಸಮಾಧಾನ ಪಡಿಸಲು ಅವರು ನಿರ್ಬಂಧಿತರಾಗಿದ್ದರು. ಅವರಿಗೆಲ್ಲಾ ಸ್ಥಾನಗಳನ್ನು ಸಮಿತಿಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಕೊಡಲು ಉಪಕ್ರಮಿಸಿದರು. ಉದಾಹರಣೆಗೆ ಕನ್ನಡ ಚಳುವಳಿಯ ನಾರಾಯಣಕುಮಾರ್ ಅವರಿಗೆ ಚಲನಚಿತ್ರ ಅಭಿವೃದ್ಧಿ ಕಾರ್ಪೊರೇಷನ್‌ನ ನಿರ್ದೇಶಕರಲ್ಲೊಬ್ಬರಾಗಿ ನೇಮಿಸಿದುದು.

(3ನೇ ಪುಟ ನೋಡಿ)

ಚೀನಾ ದೇಶದ ಜನತೆಗೆ ಹಾರ್ದಿಕ ಶುಭಾಶಯಗಳು

ಅಕ್ಟೋಬರ್ 1 ಚೀನಾದ ಮಹಾಕ್ರಾಂತಿಯ ದಿನ 1949ರಲ್ಲಿ ಚೀನಾ ಸ್ವಾತಂತ್ರ್ಯಗಳಿಸಿತು. ಹಲವಾರು ವರ್ಷಗಳ ದೀರ್ಘ ಹೋರಾಟದ ಬಳಿಕ ಚೀನಾದ ಜನತೆ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿ- ಪಾಳೇಯಗಾರಿ ಶಕ್ತಿಗಳನ್ನು ಸೋಲಿಸಿ ಜಗತ್ತಿನಲ್ಲೇ ಪ್ರಪ್ರಥಮ ಬಾರಿಗೆ ಜನತಾ ಪ್ರಭುತ್ವ ಕ್ರಾಂತಿಯನ್ನು ಯಶಸ್ವಿಗೊಳಿಸಿ ಜನತಾ ಪ್ರಜಾಪ್ರಭುತ್ವ ಸರಕಾರವನ್ನು ಸ್ಥಾಪಿಸಿತು. ಇದೊಂದು ಹೊಸ ಮಾದರಿಯ ಕ್ರಾಂತಿಯಾಗಿತ್ತು. 1917 ರಲ್ಲಿ ರಷ್ಯಾದಲ್ಲಿ ನಡೆದ ಸೊಷಲಿಸ್ಟ್ ಕ್ರಾಂತಿಯ ಬಳಿಕ 1949 ರ ಚೀನಾದ ಕ್ರಾಂತಿಯು ಚಾರಿತ್ರಿಕವಾಗಿತ್ತು.

1949 ರಲ್ಲಿ ಚೀನಾದ ಜನಸಂಖ್ಯೆಯು 60 ಕೋಟಿಯಿತ್ತು. ಅದೊಂದು ಹಿಂದುಳಿದ ರಾಷ್ಟ್ರವಾಗಿತ್ತು. ಬಡತನದಲ್ಲಿ ನರಳುತ್ತಿದ್ದ ಈ ದೇಶವು ಅಲ್ಲಿಯ ಪಾಳೆಯಗಾರರ ಶೋಷಣೆಗೂ ವಿದೇಶೀ ಸಾಮ್ರಾಜ್ಯ ಶಾಹಿಗಳ ಸುಲಿಗೆಗೂ ಬಲಿಯಾಗಿ ನರಕಯಾತನೆಯನ್ನು ಅನುಭವಿಸುತ್ತಿತ್ತು. ಈ ಜನತೆಯನ್ನು ಸಂಘಟಿಸಿ ಹೋರಾಡಲು ಅಲ್ಲಿಯ ಕಮ್ಯೂನಿಸ್ಟ್ ಪಕ್ಷ ಮುಂದೆ ಬಂದು ಧೀರ್ಘ ಹೋರಾಟದ ಬಳಿಕ 1949 ರಲ್ಲಿ ಯಶಸ್ಸುಗಳಿಸಿತು.

1949 ರಲ್ಲಿ ಚೀನಾ ದೇಶವು ಆರ್ಥಿಕವಾಗಿ ಭಾರತಕ್ಕಿಂತಲೂ ಹಿಂದುಳಿದ ದೇಶವಾಗಿತ್ತು. 1947 ರಲ್ಲಿ ಸ್ವಾತಂತ್ರ್ಯ ಪಡೆದ ಭಾರತದ ಪ್ರಗತಿಗೆ ಚೀನಾವನ್ನು ಹೋಲಿಸಿದರೆ ಚೀನಾ ದೇಶ ನಮಗಿಂತ ಈಗ ಎಷ್ಟೋ ಪಟ್ಟು ಮುಂದೆ ಹೋದದ್ದನ್ನು ನೋಡಬಹುದು. ಉದಾಹರಣೆಗೆ ಭಾರತದ 1983 ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಸುಮಾರು 150 ಮಿಲಿಯ ಟನ್‌ಗಳಷ್ಟು ಆಗಿದ್ದರೆ. ಚೀನಾದಲ್ಲಿ 387 ಮಿಲಿಯ ಟನ್ ಉತ್ಪಾದನೆಯಾಗಿದೆ. ಉಕ್ಕಿನ ಉತ್ಪಾದನೆ ಚೀನಾದಲ್ಲಿ 39 ಮಿಲಿಯ ಟನ್‌ಗಳಷ್ಟಾಗಿದ್ದರೆ ಭಾರತದಲ್ಲಿ 7·5 ಮಿಲಿಯ ಟನ್‌ಗಳಷ್ಟು ಇದೆ. ಚೀನಾದಲ್ಲಿ ಕಲ್ಲಿದ್ದಲು ಉತ್ಪಾದನೆಯು 700 ಮಿಲಿಯ ಟನ್‌ಗಳಾಗಿರುವಾಗ ಭಾರತದಲ್ಲಿ 145 ಮಿಲಿಯ ಟನ್‌ಗಳಷ್ಟಾಗಿದೆ. ಚೀನಾದಲ್ಲಿ ಎಣ್ಣೆಯ ಉತ್ಪಾದನೆ 110 ಮಿಲಿಯ ಟನ್‌ಗಳಿಗಿಂತಲೂ ಹೆಚ್ಚಾಗಿರುವಾಗ ಭಾರತದಲ್ಲಿ 25 ಮಿಲಿಯ ಟನ್ ಮುಟ್ಟುವುದರಲ್ಲಿದೆ. ಇದಲ್ಲದೆ ಚೀನಾ ದೇಶದಲ್ಲಿ ಬೆಲೆಗಳನ್ನು ಸ್ಥಗಿತಗೊಳಿಸಿದ್ದರಿಂದ ಜನರ ಜೀವನ ಮಟ್ಟ ನಿರಂತರವಾಗಿ ಏರಿಕೊಂಡು ಬಂದಿದೆ. ಅಲ್ಲಿ ಈಗ ನಿರುದ್ಯೋಗವೆಂಬುದಿಲ್ಲ. ಹಣದುಬ್ಬರದ ಪಿಡುಗೆ ಇರವುದಿಲ್ಲ. ಆರ್ಥಿಕ ಬಿಕ್ಕಟ್ಟೆಂಬುದಿಲ್ಲ.

ಇದು ಹೇಗೆ ಸಾಧ್ಯವಾಯಿತು ? ನಮ್ಮ ಸ್ವಾತಂತ್ರ್ಯ ಹೋರಾಟಕ್ಕೂ ಅಲ್ಲಿಯ ಕ್ರಾಂತಿಕಾರಿ ಹೋರಾಟಕ್ಕೂ ಇರುವ ವ್ಯತ್ಯಾಸ ಇದರಲ್ಲಿ ಕಾಣುತ್ತದೆ. 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತರೂ ಅಧಿಕಾರ, ಪ್ರಭುತ್ವ ಹಿರಿಬಂಡವಾಳಶಾಹಿ—ಪಾಳೆಯಗಾರಿ ವರ್ಗಗಳ ಕೈಯಲ್ಲಿ ಹೋಯಿತು. ಆದರೆ ಚೀನಾದಲ್ಲಿ ಕಾರ್ಮಿಕ ವರ್ಗದ ನೇತೃತ್ವದ ಕಾರ್ಮಿಕ ರೈತ ವರ್ಗಗಳ ಐಕ್ಯತೆಯ ಜನತಾ ಪ್ರಜಾಪ್ರಭುತ್ವ ಸರ್ಕಾರ ಸ್ಥಾಪನೆಯಾದದ್ದರಿಂದ ಅವರ ಅಭಿವೃದ್ಧಿಯು ತ್ವರಿತಗತಿಯಲ್ಲಿ ಮುಂದೆ ಸಾಗುತ್ತಿದೆ. ಹಿಂದುಳಿದ ರಾಷ್ಟ್ರಗಳಿಗೆ ಚೀನಾದ ಕ್ರಾಂತಿಯು ಹೊಸ ಹಾದಿಯನ್ನು ತೋರಿಸಿದೆ. ಹಿಂದುಳಿದ ರಾಷ್ಟ್ರಗಳಲ್ಲಿ ಕಾರ್ಮಿಕವರ್ಗ ಸಾಕಷ್ಟು ಪ್ರಮಾಣದಲ್ಲಿ ಬೆಳೆಯದಿದ್ದರಿಂದ ಕಮ್ಯೂನಿಸ್ಟ್ ಪಾರ್ಟಿಗಳು ಮುಂದುವರಿಯಲು ಸಾಧ್ಯವಿಲ್ಲವೆಂದೂ ಮಾರ್ಕ್ಸ್ ಸಿದ್ಧಾಂತ ಅವರಿಗೆ ಅನ್ವಯವಾಗುವುದಿಲ್ಲವೆಂದೂ ಬಂಡವಾಳಶಾಹಿಗಳು ನಡೆಸುತ್ತಿರುವ ಪ್ರಚಾರವನ್ನು ಚೀನಾ ಅಲ್ಲಗೆಳೆದಿದೆ.

(8ನೇ ಪುಟ ನೋಡಿ)

"ರಾಜ್ಯೋತ್ಸವ ವಿಶೇಷಾಂಕ"

ಈ ಸಲದ ನವೆಂಬರ್ 1 ರಂದು "ಐಕ್ಯರಂಗ"ದ ಕರ್ನಾಟಕ ರಾಜ್ಯೋತ್ಸವದ ವಿಶೇಷ ಸಂಚಿಕೆಯೊಂದನ್ನು ಹೊರತರಲು ನಿರ್ಧರಿಸಲಾಗಿದೆ. ವಿಶೇಷ ಸಂಚಿಕೆಯು 24 ಪುಟಗಳನ್ನು ಹೊಂದಿದ್ದು ಅದರ ಬೆಲೆ ಕೇವಲ 1 ರೂಪಾಯಿ ಏಜೆಂಟರಿಗೆ ಅಥವ ಓದುಗರಿಗೆ ಹೆಚ್ಚಿನ ಪ್ರತಿಗಳ ಅವಶ್ಯಕತೆಯಿದ್ದಲ್ಲಿ ಕೂಡಲೆ ನಮಗೆ ಬರೆದು ತಿಳಿಸಬೇಕು.

ಕಾಂಗ್ರೆಸ್‌ಯಲ್ಲಿ ಗೊಂದಲ - ಸಾಠೆ ಪ್ರಕರಣ

— ಎನ್. ಕೆ. ಉಪಾಧ್ಯಾಯ

ಕೇಂದ್ರ ಮಂತ್ರಿ ವಸಂತ ಸಾಠೆಯವರು ಆಗಸ್ಟ್ 27 ರಂದು ಕೆಲವು ಲೋಕಸಭಾ ಸದಸ್ಯರಿಗೆ ಭೋಜನ ಕೂಟವನ್ನೇರ್ಪಡಿಸಿ ಈಗಿರುವ ಲೋಕಶಾಹಿ ಪದ್ಧತಿ ನಿಷ್ಕ್ರಿಯವಾಗಿರುವುದರಿಂದ ಅಧ್ಯಕ್ಷೀಯ ಮಾದರಿ ಸರಕಾರ ದೇಶದಲ್ಲಿ ಅಸ್ತಿತ್ವದಲ್ಲಿ ಬರಬೇಕೆಂದೂ, ಮುಂಬರುವ ಲೋಕಸಭೆ ಚುನಾವಣೆಯ ಮುಂಚಿತವಾಗಿಯೇ ಅದು ಜಾರಿಯಲ್ಲಿ ಬರಬೇಕೆಂದೂ ಯಾಕೆಂದರೆ ಈ ಸಲ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆಯಲಾರದೆಂಬ ಅಭಿಪ್ರಾಯಕ್ಕೆ ಚಾಲನೆ ನೀಡಿದರು. ಈ ಸುದ್ದಿ ಪ್ರಕಟವಾದ ಕೂಡಲೇ ಕಾಂಗ್ರೆಸ್‌ನ ಹಲವಾರು ಮುಖಂಡರು, ಲೋಕಸಭೆ ಸದಸ್ಯರೆಲ್ಲ ಸಾಠೆಯವರ ಅಭಿಪ್ರಾಯವನ್ನು ಖಂಡಿಸಿದರು. ಇಂದಿರಾಗಾಂಧಿ-ರಾಜೀವ ಗಾಂಧಿಯವರೂ ಸಾಠೆಯವರ ಹೇಳಿಕೆ ಕೇಂದ್ರ ಸರಕಾರದ, ಕಾಂಗ್ರೆಸ್‌ನ ತಿಳುವಳಿಕೆ ಅಲ್ಲವೆಂದೂ, ಅಂಥ ವಿಚಾರವನ್ನು ತಾವು ಹೊಂದಿಲ್ಲೆಂದೂ ಸಕಾಲದಲ್ಲೇ ಚುನಾವಣೆ ನಡೆಸಲಾಗುವುದೆಂದೂ ಪದೇ ಪದೇ ಹೇಳಿಕೆಗಳನ್ನಿತ್ತರು.

ಇಂದಿರಾ ಗಾಂಧಿಯ ಪೂರ್ಣ ಮನವೇಕೆಗನುಸಾರವಾಗಿಯೇ ವಸಂತ ಸಾಠೆಯವರು ಭೂ-ಬಾಣ ಬಿಟ್ಟಿದ್ದಾರೆಂದೂ, ಜನಾಭಿಪ್ರಾಯ ತಿಳಿದುಕೊಳ್ಳುವುದೇ ಅದರ ಮೂಲ ಉದ್ದೇಶವೆಂದೂ ವಿರೋಧ ಪಕ್ಷಗಳು ಹೇಳುತ್ತಾ ಬಂದಿವೆ. ಈ ಹೊತ್ತು ಅದು ನಿಜ ಸಂಗತಿಯಾಗಿ ಹೊರಬಿದ್ದಿದೆ. ಯಾಕೆಂದರೆ ಇಂದಿರಾಗಾಂಧಿಯ ಅಥವಾ ಆಕೆಯ ನಿಕಟವರ್ತಿಗಳ ಸಲಹೆ ಪಡೆಯದೆ ಇಂಥ ಅಭಿಪ್ರಾಯ ಗಾಳಿಯಲ್ಲಿ ತೇಲಿ ಬಂದದ್ದಾದರೆ ಅಂಥ ವ್ಯಕ್ತಿ ಬಲಿಪಶುವಾಗ ಬೇಕಲ್ಲದೆ ಬೇರೆ ಮಾರ್ಗವೇ ಇಲ್ಲೆಂಬ ಸಂಗತಿ ಎಲ್ಲರಿಗೂ ಗೊತ್ತು. ಈಗ ಬೆಕ್ಕು ಚೀಲದಿಂದ ಹೊರಬಿದ್ದಿದೆ.

ಯಾಕೆ ಈ ವಿಚಾರ

ಲೋಕಶಾಹಿ ಪದ್ಧತಿಯನ್ನು ಬಿಟ್ಟು ಅಧ್ಯಕ್ಷೀಯ ಮಾದರಿ ವ್ಯವಸ್ಥೆಯತ್ತ ಇಂದಿರಾಗಾಂಧಿ ಧಾವಿಸಲು ಕಾರಣವೇನು? ಮುಖ್ಯವಾಗಿ ಎಡಶಕ್ತಿಗಳು ಅದರ ಜೊತೆಯಲ್ಲಿ ಪ್ರಜಾಪ್ರಭುತ್ವ ಶಕ್ತಿಗಳು ದೇಶದಲ್ಲಿ ಬೆಳೆದು ಬರುತ್ತಿವೆ. 1977 ರಲ್ಲಿ ಕಾಂಗ್ರೆಸ್ ಸಂಪೂರ್ಣ ಸೋತು ಹೋಗಿತ್ತು, ಕಾಂಗ್ರೆಸ್ಸಿನ ಆರ್ಥಿಕ-ರಾಜಕೀಯ ಧೋರಣೆಗಳು ಜನತೆಲ್ಲಿ ಅಸಂತುಷ್ಟಿಯನ್ನು ತೀವ್ರಗೊಳಿಸುತ್ತಿವೆ. ಪರಿಣಾಮವಾಗಿ ಹೋದ ವರ್ಷ ಆಂಧ್ರ-ಕರ್ನಾಟಕಗಳಲ್ಲೂ, ಕಾಶ್ಮೀರದಲ್ಲೂ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳಬೇಕಾಯಿತು. ಪಶ್ಚಿಮ ಬಂಗಾಲ-ತ್ರಿಪುರಾಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ನೇತೃತ್ವದ ಎಡರಂಗ ಸರಕಾರ ಹೆಚ್ಚು ಜನ ಬೆಂಬಲ ಪಡೆದು ಭದ್ರವಾಗುಳಿದಿದೆ. ಕೇರಳ ಯಾವ ಘಳಿಗೆಯಲ್ಲಾದರೂ ಕಾಂಗ್ರೆಸ್ ಕೈಬಿಡುತ್ತದೆ. ಅಸ್ಸಾಂ ಪಂಜಾಬ್‌ಗಳಲ್ಲಿಯ ಪರಿಸ್ಥಿತಿ ಸಮಾಧಾನಕಾರಕವಾಗಿಲ್ಲ. ಬಿಹಾರ-ಒರಿಸ್ಸಾಗಳಲ್ಲಿ ವಿರೋಧ ಪಕ್ಷಗಳು ಬಲಗೊಳ್ಳುತ್ತಿವೆ. ಇತರ ಪ್ರಾಂತಗಳಲ್ಲಿ ಅಸಂತುಷ್ಟಿಯು ಹೊಗೆ ಹೆಚ್ಚಾಗುತ್ತಿದೆ. ಆದ್ದರಿಂದ ಹೆಚ್ಚು ಕಾಲ ತನ್ನ ಸಾಮ್ರಾಜ್ಯ ಬಾಳಲು ಶಕ್ಯವಿಲ್ಲೆಂಬ ತಿಳುವಳಿಕೆ ಇಂದಿರಾಗಾಂಧಿಯಲ್ಲುಂಟಾಗಿದೆ. ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆ ನಡೆಸಿದರೆ ತನ್ನ ಗೆಲುವು ನಿಶ್ಚಿತವಲ್ಲೆಂಬ ಸಂಶಯ ಪಿಶಾಚಿ ಅವರನ್ನು ಕಾಡುತ್ತಿದೆ. ವಸಂತ ಸಾಠೆಯವರೇ ಅಂಥ ಭವಿಷ್ಯ ನುಡಿದಿದ್ದಾರೆ. ಅಧ್ಯಕ್ಷೀಯ ಮಾದರಿಯ ಸರಕಾರವಾದರೆ ಕೆಲವು ವರ್ಷಗಳಾದರೂ ತಾನು ಚುನಾವಣೆಯಲ್ಲಿ ಆರಿಸಿ ಬರಬಹುದೆಂದೂ, ತಾವು ಅಧ್ಯಕ್ಷಳಾಗಿ ತನ್ನ ಮಗನನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಿಸಿ ಪರಂಪರೆಯನ್ನು ಕಾಯ್ದುಕೊಂಡು ಹೋಗಬಹುದೆಂದೂ ಅವರ ಆಕಾಂಕ್ಷೆ. ಜನರ ಮತದಾನದ ಹಕ್ಕಿಗೆ ಹೆದರಿ ಈ ವಿಚಾರಕ್ಕೆ ಬಂದಿದ್ದಾರೆ. ಇಂದಿರಾಗಾಂಧಿ ಸಾಠೆಯವರ ಮೂಲಕ ಅದಕ್ಕೆ ಚಾಲನೆ ನೀಡಿದ್ದಾರೆ.

ಅಧ್ಯಕ್ಷೀಯ ಪದ್ಧತಿ

ಸಂಸದೀಯ ಪದ್ಧತಿಯಲ್ಲಿ ಪ್ರಧಾನ ಮಂತ್ರಿ, ಲೋಕಸಭೆಗೇ ಜನತೆಗೆ ಜವಾಬ್ದಾರರು. ಆಡಳಿತೆಯ ಲೋಪದೋಷಗಳಿಗೂ, ಜನತೆ ಎದುರಿಸುವ ಸಮಸ್ಯೆಗಳಿಗೂ, ರಾಷ್ಟ್ರದ ರಕ್ಷಣೆ, ವಿದೇಶ ನೀತಿಗಳಿಗೆಲ್ಲ ಅವರೇ ಉತ್ತರಿಸಬೇಕಾಗುತ್ತದೆ. ಈಗಿರುವ ಏಳನೆಯ ಲೋಕಸಭೆಯಲ್ಲಿರುವಂತೆ ಮುಂಬರುವ ಎಂಟನೆಯ ಲೋಕಸಭೆಯಲ್ಲಿ ತನಗೆ ಮೂರನೇ ಎರಡಂಶ ಬಹುಮತ ಸಿಗಲಾರದು. ಅಷ್ಟೇ ಅಲ್ಲ ಸಾಠೆ ಹೇಳುವಂತೆ ಯಾವ ಪಕ್ಷಕ್ಕೂ ಬಹುಮತ ದೊರಕದೆ ಸಮ್ಮಿಶ್ರ ಸರಕಾರ ರಚಿಸಬೇಕಾದ ಪರಿಸ್ಥಿತಿಯೂ ತಲೆದೋರಬಹುದೆಂಬ ಭೀತಿ ಅವರಲ್ಲಿದೆ. ಅಧ್ಯಕ್ಷೀಯ ಪದ್ಧತಿಯಲ್ಲಿ ರಾಷ್ಟ್ರದ ಅಧ್ಯಕ್ಷರನ್ನು ಜನತೆ ನೇರವಾಗಿ ಚುನಾಯಿಸುತ್ತದೆ. ಹೀಗೆ ಚುನಾಯಿತರಾದವರು ಸಂಸತ್ತಿಗೆ ಜವಾಬ್ದಾರರಾಗಿರುವುದಿಲ್ಲ. ಹಾಗೆಯೇ ಸಂಸತ್ ಸದಸ್ಯರಲ್ಲದವರನ್ನೂ ಮಂತ್ರಿಗಳನ್ನಾಗಿ ನೇಮಿಸಬಹುದು. ಅಷ್ಟೇ ಅಲ್ಲ, ಅಧ್ಯಕ್ಷರೆಂದರೆ ಎಲ್ಲರಿಗೂ ಮಿಗಿಲಾದ ಅನಿರ್ಬಂಧಿತ ಅಧಿಕಾರ ಹೊಂದಿದವರಾಗಿರುತ್ತಾರೆ. ಈಗ ಇಂದಿರಾ ಗಾಂಧಿಗೆ ಕಡಿಮೆ ಅಧಿಕಾರವಿದೆಯೆಂಬ ಅರ್ಥವಲ್ಲ. ತನ್ನ ಪಕ್ಷದ ಚುನಾವಣೆಯನ್ನು ನಡೆಸದೆ, ನೇಮಕಾತಿ ಸಮಿತಿ, ಅಧಿಕಾರಿಗಳ ಮೂಲಕ ಮನ ಬಂದಂತೆ ಸರ್ವಾಧಿಕಾರಿಯಾಗಿ ವರ್ತಿಸುತ್ತಿದ್ದಾರೆಂಬುದು ನಿಜ. ಆದರೆ ಚುನಾವಣೆಯಲ್ಲಿ ತನ್ನ ಪಕ್ಷಕ್ಕೆ ಬಹುಮತ ಸಿಗದಿದ್ದರೆ ಎಂಬ ಪ್ರಶ್ನೆ. ಅದಕ್ಕಾಗಿಯೇ ಚುನಾವಣೆಯಲ್ಲಿ ತನ್ನ ಪಕ್ಷ ಸೋಲುವ ಮುಂಚೆಯೇ ತನ್ನ ಪಟ್ಟಾಭಿಷೇಕವಾಗಬೇಕಲ್ಲ? ಅದಕ್ಕಾಗಿಯೇ ಈ ತರಾತುರಿ.

ಅಧ್ಯಕ್ಷ ಮಾದರಿಯ ಸರಕಾರ ವಿವಾದ ಹೊಸದೇನಲ್ಲ. ತುರ್ತು ಪರಿಸ್ಥಿತಿಯ ಕಾಲದಲ್ಲಿ ತನ್ನ ಆತ್ಮೀಯ ಚೇಲ ಅಬ್ದುಲ್ ರಹಮಾನ್ ಅಂತುಲೆ ಮಹಾರಾಷ್ಟ್ರದ ಮಾಜಿ ಮುಖ್ಯ ಮಂತ್ರಿ, ದಿವಂಗತ ರಜನಿ ದೇಸಾಯಿಯವರ ಮೂಲಕ ಈ ಹುಳಿಯನ್ನೆಬ್ಬಿಸಿದ್ದರು ಇಂದಿರಾ ಗಾಂಧಿ. ಇದರ ಪರವಾಗಿ ವಿಚಾರ ಗೋಷ್ಠಿಗಳೂ, ಚರ್ಚಾ ಕೂಟಗಳೂ ನಡೆದವು. ಆದರೆ ದೇಶದಲ್ಲಿ ಒಟ್ಟಭಿಪ್ರಾಯ ಈ ವಿಚಾರವನ್ನು ವಿರೋಧಿಸಿದಾಗ, ಅದನ್ನು ಕೈ ಬಿಡಲಾಯಿತು. ಆದರೆ ಈಗ ಮತ್ತೆ ವಸಂತ ಸಾಠೆ ಮತ್ತು ತನ್ನ ಪರ ನ್ಯಾಯವಾದಿಗಳ ಮೂಲಕ ಅದಕ್ಕೆ ಚಾಲನೆ ಕೊಡಲಾಗಿದೆ.

ಪದ್ಧತಿ ಬದಲಾವಣೆ ಸಾಧ್ಯವೇ

ಸಂಸದೀಯ ಪದ್ಧತಿಯಿಂದ ಅಧ್ಯಕ್ಷೀಯ ಪದ್ಧತಿಗೆ ಬದಲಾಯಿಸಿಕೊಳ್ಳುವ ಪ್ರಯತ್ನ ಸಾಧಿಸಬಹುದೇ? ಅದೇನೂ ಅಷ್ಟು ಸುಲಭವಲ್ಲ. ಆಂಧ್ರದ ಎನ್ ಟಿ ಆರ್ ಸಂಪುಟವನ್ನು ಉರುಳಿಸಿದ ಕಾರಣದಿಂದಾಗಿ ದೇಶಾದ್ಯಂತ ಭುಗಿಲೆದ್ದ ಪ್ರತಿರೋಧದ ಮಧ್ಯೆ ಈ ವಿಚಾರಕ್ಕೆ ಚಾಲನೆ ಕೊಡಲಾಗಿದೆ. ಆದ್ದರಿಂದ ಸುಲಭವಾಗಿಯೇ ಅದಕ್ಕೆ ಬೆಂಬಲ ಸಿಗುವುದಿಲ್ಲ: ಅಷ್ಟೇ ಅಲ್ಲ ಅಂಥ ವಿಚಾರವನ್ನು ಒತ್ತಾಯದಿಂದ ಹೇರಲು ಪ್ರಯತ್ನ ಮಾಡಿದ್ದಾದರೆ ಎನ್ ಟಿ ಆರ್ ಸರಕಾರವನ್ನುಳಿಸಲು ವಿರೋಧ ಪಕ್ಷಗಳೂ ಜನತೆಯೂ ನಡೆಸಿದ ಹೋರಾಟಕ್ಕಿಂತಲೂ ಉಗ್ರ ಚಳುವಳಿ ಸಂವಿಧಾನ ಪದ್ಧತಿಯ ರಕ್ಷಣೆಗಾಗಿ ನಡೆಯಬಹುದೆಂಬ ಭೀತಿ ಇಂದಿರಾ ಗಾಂಧಿಗಿಲ್ಲದಿಲ್ಲ.

ಎರಡನೆಯದಾಗಿ ಪ್ರಸ್ತುತ ಎರಡೂ ಸದನಗಳಲ್ಲಿ ಇಂದಿರಾ ಕಾಂಗ್ರೆಸ್ಸಿಗೆ 3ನೇ ಎರಡು ಬಹುಮತವಿರುವುದರಿಂದ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ಮಾಡುವ ಮೂಲಕ ಬದಲಾವಣೆ ತರಬಹುದು. ಇದಕ್ಕಾಗಿಯೇ ಸಂಸತ್ತನ್ನು ರಾಜ್ಯಾಂಗ ಸಭೆಯಾಗಿ ಪರಿವರ್ತಿಸುವ ಅವಶ್ಯಕತೆಯಿಲ್ಲೆಂದು ವಸಂತ ಸಾಠೆ ಹೇಳಿದ್ದಾರೆ. ಅದು ಸರಿಯಲ್ಲ. ಕೇಶವಾನಂದ ಭಾರತಿ ಪ್ರಕರಣದಲ್ಲಿತ್ತ ತೀರ್ಪಿನಲ್ಲಿ, ಸಂವಿಧಾನದ ಮೂಲಭೂತ ಸ್ವರೂಪವನ್ನು ಬದಲಾಯಿಸುವ ಹಕ್ಕು ಸಂಸತ್ತಿಗಿಲ್ಲೆಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟ ಪಡಿಸಿದೆ. ಆದ್ದರಿಂದ ಸಂವಿಧಾನಾತ್ಮಕವಾಗಿಯೂ ತೊಂದರೆ ಬರಬಹುದಾಗಿದೆ.

ಹೀಗಾಗಿ ಕಾಂಗ್ರೆಸ್ ಮುಖಂಡತ್ವ ಪೇಚಿನಲ್ಲಿ ಬಿದ್ದಿದೆಂದರೆ ತಪ್ಪಾಗಲಿಕ್ಕಿಲ್ಲ.

ಬೆಲೆಯೇರಿಕೆ, ನಿರುದ್ಯೋಗ ಸಮಸ್ಯೆ, ಕೈಗಾರಿಕೆಗಳ ಮುಚ್ಚುವಿಕೆ ಭ್ರಷ್ಟಾಚಾರ, ಜಾತೀಯ ಕಲಹ, ವಿದೇಶೀ ಶಕ್ತಿಗಳ ಕೈವಾಡ ಮಾತ್ರವಲ್ಲದೆ ಕಾಂಗ್ರೆಸ್ ಪಕ್ಷದೊಳಗೆ ಆಳವಾಗಿ ಬೇರೂರಿದ ಗುಂಪುಗಾರಿಕೆ, ಅಧಿಕಾರ ಲಾಲಸೆ, ಜಾತೀಯತೆಗಳಿಂದಾಗಿಯೂ ಕಾಂಗ್ರೆಸ್ ಪ್ರಭಾವ ಕುಸಿಯುತ್ತಿರುವುದನ್ನು ಮಧ್ಯಂತರ ಲೋಕ ಸಭೆ ಉಪಚುನಾವಣೆಗಳಲ್ಲಿ ಕಂಡಿದ್ದೇವೆ. ಶಾಸನ ಸಭೆಗಳಲ್ಲಿ ಬಹುಮತವಿದ್ದ ಕಾಂಗ್ರೆಸ್ ವಿರೋಧಿ ಕಾಶ್ಮೀರ-ಆಂಧ್ರ ಸರಕಾರಗಳನ್ನು ಉರುಳಿಸಿರುವುದನ್ನು ಪ್ರತಿಭಟಿಸಲು ದೇಶಾದ್ಯಂತ ನಡೆದ ಚಳುವಳಿ, ಆ ಹೋರಾಟಕ್ಕೆ ಮಣಿದು ಭಾಸ್ಕರರಾವನ್ನು ಕಿತ್ತು ಹಾಕಿ ಎನ್ ಟಿ ಆರ್ ಅವರ ಮಂತ್ರಿ ಮಂಡಲ ಪುನಃ ರಚಿಸಲು ಅವಕಾಶ ಮಾಡಿಕೊಟ್ಟಿರುವುದನ್ನು ನೋಡುವಾಗ ದೇಶದಲ್ಲಿ ಕಾಂಗ್ರೆಸ್ ಹಾಗೂ ಇಂದಿರಾ ಪ್ರಭಾವ ಕುಸಿಯುತ್ತಿದೆಂದು ಸ್ಪಷ್ಟ ಕಂಡು ಬರುತ್ತಿದೆ. ಈ ರೀತಿ ನಿಧಾನವಾಗಿ ಇಂದಿರಾ ಪ್ರಭುತ್ವದ ಮೆರಗು ಮಬ್ಬಾಗುತ್ತಿರುವಾಗ ತಾನು ಹೇಳಿದಂತೆಯೇ ಯೋಜನೆಗಳು ಕಾರ್ಯಗತವಾಗಬೇಕೆಂಬ ಇಂದಿರಾ ಹಠ ಸಾಧಿಸಲಾರದು. ಕೇಂದ್ರದ ಆದೇಶದಂತೆ ವರ್ತಿಸಿದ ರಾಮಲಾಲ್ ಮನೆ ಗಸ್ತಣೆ ಪಡೆದ. ಭಾಸ್ಕರರಾವ್ ಹೇಳ ಹೆಸರಿಲ್ಲದೆ ಕುರ್ಚಿ ಬಿಟ್ಟ. ಹೀಗಿರುವಾಗ ಪದ್ಧತಿ ಬದಲಾಗಬೇಕೆಂಬ ವಸಂತ ಸಾಠೆಯವರೂ ತಮ್ಮ ಇಂದಿರಾ ಪರ ಪ್ರಚಾರ ಟಾಂಗಾ ನಿಲ್ಲಿಸಬೇಕಾಗುತ್ತದೆ.

ತನ್ನ ವಂಶ ಪಾರಂಪರ್ಯ ಆಡಳಿತೆಯನ್ನು ಸ್ಥಿರಗೊಳಿಸುವ ಉದ್ದೇಶದಿಂದ ಸಂವಿಧಾನವನ್ನೇ ಬದಲಾಯಿಸಲು ಹೊರಟಿರುವ ಇಂದಿರಾ ಮತ್ತವರ ಬೆಂಬಲಗರ ಕುಚೋದ್ಯವನ್ನು ಸಮರ್ಥವಾಗಿ ಎದುರಿಸಬೇಕಾದರೆ ದೇಶದಲ್ಲಿ ಮುಖ್ಯವಾಗಿ ಎಡ ಶಕ್ತಿ ಮತ್ತು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಲಿಷ್ಠವಾಗುವುದು ಅತ್ಯಗತ್ಯ. ಆದರ ಜೊತೆಯಲ್ಲಿಯೇ ಎಲ್ಲಾ ವಿರೋಧ ಪಕ್ಷಗಳನ್ನೂ, ಶಕ್ತಿಗಳನ್ನೂ ಒಂದೆಡೆ ಸೇರಿಸಿ ಐಕ್ಯ ಹೋರಾಟ ನಡೆಸುವುದೂ ಅಷ್ಟೇ ಮಹತ್ವದ್ದಾಗಿದೆ.

★

ಕಾರ್ಮಿಕ ಸಚಿವರಿಗೆ ಮನವಿ

ತಾ|| 11-9-1984 ರಂದು ರಾಜ್ಯ ಸಿಐಟಿಯು ಅಧ್ಯಕ್ಷರಾದ ಕಾ|| ಸೂರ್ಯನಾರಾಯಣರಾವ್ ಇವರ ನೇತೃತ್ವದಲ್ಲಿ ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನಿನ ಶಿಷ್ಟಮಂಡಲವೊಂದು ಮಾನ್ಯ ಕಾರ್ಮಿಕ ಸಚಿವರನ್ನು ಭೇಟಿಯಾಗಿ ಮನವಿಯೊಂದನ್ನು ಅರ್ಪಿಸಿತು. ಮನವಿಯಲ್ಲಿ ಹಂಚಿನ ಕೈಗಾರಿಕೆಗೆ ಏರಿಳಿತ ತುಟ್ಟಿ ಭತ್ತೆ ಸಹಿತ ಕನಿಷ್ಠ ವೇತನ ನಿರ್ಣಯ ಮಾಡಲು ಈ ಕೈಗಾರಿಕೆಯ ಪರಿಸ್ಥಿತಿಯನ್ನು ಅಧ್ಯಯ ಮಾಡಲು ತ್ರಿಪಕ್ಷೀಯ ಸಮಿತಿಯನ್ನು ರಚಿಸುತ್ತೇನೆಂದು 1984 ಜನವರಿಯಲ್ಲಿ ಕಾರ್ಮಿಕ ಮಂತ್ರಿಯವರು ಕೊಟ್ಟ ಆಶ್ವಾಸನೆಯು ಇನ್ನೂ ಕಾರ್ಯಗತ ಮಾಡದ್ದನ್ನು ಕೂಡಲೆ ಕಾರ್ಯಗತ ಮಾಡಬೇಕೆಂದು ಒತ್ತಾಯಿಸಲಾಗಿದೆ.

ಶಿಷ್ಟಮಂಡಲದಲ್ಲಿ ಯೂನಿಯನಿನ ಪ್ರಧಾನ ಕಾರ್ಯದರ್ಶಿಯವರಾದ ಕೆ. ಮೂಸಬ್ಬ, ಕಾ. ಶೀನಭಂಡಾರಿ, ಗಂಗಾಧರಶೆಟ್ಟಿ ಮತ್ತು ವಿ. ನರಸಿಂಹ ಮೊದಲಾದವರು ಇದ್ದರು. ಮನವಿಯನ್ನು ಸ್ವೀಕರಿಸಿದ ಸಚಿವರು ಶೀಘ್ರದಲ್ಲೇ ಈ ಬಗ್ಗೆ ಕ್ರಮ ವಹಿಸುವ ಭರವಸೆಯನ್ನಿತ್ತರು.

ಶಿಷ್ಟಮಂಡಲವು ಇ. ಎಸ್. ಐ. ಡಿಸ್ಪೆನ್ಸರಿಯಲ್ಲಿ ಡಾಕ್ಟರುಗಳು ಇಲ್ಲದ ಬಗ್ಗೆ ಹಾಗೂ ಲೇಬರ್ ಕೋರ್ಟಿನಲ್ಲಿ ನ್ಯಾಯಾಧೀಶರಿಲ್ಲದ ಬಗ್ಗೆ ಸಚಿವರ ಗಮನಕ್ಕೆ ತಂದಾಗ ಕೂಡಲೆ ಈ ಬಗ್ಗೆ ಸೂಕ್ತ ಕ್ರಮ ವಹಿಸುವ ಆಶ್ವಾಸನೆಯನ್ನು ಕೊಟ್ಟರು.

ಕರ್ನಾಟಕದ ಪರಿಸ್ಥಿತಿ ವಿರೋಧ ಪಕ್ಷಗಳಿಗೆ ಅನುಕೂಲಕರ

(1ನೇ ಪುಟದಿಂದ)

ಇದೇ ವೇಳೆಯಲ್ಲಿ ರಾಜ್ಯದ ಬಿ. ಜೆ. ಪಿ. ಯವರು ರಾಮಕೃಷ್ಣ ಹೆಗ್ಗಡೆಯವರ ಸರ್ಕಾರದ ವೈಫಲ್ಯತೆಯ ಬಗ್ಗೆ ತಾವು ವ್ಯಾಖ್ಯಾನ ಮಾಡಲು ಶುರು ಮಾಡಿದರು. ಮುನ್ಸಿಪಲ್ ಕಾರ್ಪೋರೇಶನ್ ಚುನಾವಣೆಗಳ ವೇಳೆಗಳಲ್ಲಿಯೂ ಅವರದು ಇದೇ ರಾಗವಾಗಿತ್ತು. ಆಮೇಲೆ ವಿಧಾನಪರಿಷತ್ತು ಚುನಾವಣೆಯಲ್ಲಂತೂ ಪಟ್ಟುಹಿಡಿದು ಎರಡು ಸೀಟುಗಳನ್ನು (ಒಂದು ಚುನಾವಣೆ, ಒಂದು ನೇಮಕಾತಿ) ಗಿಟ್ಟಿಸಿಕೊಂಡರು. ಆದರೂ ತೃಪ್ತಿಯಾಗದೆ ಇನ್ನು ಮುಂದೆ ನಮ್ಮ ಐದು ಷರತ್ತುಗಳಿಗೆ ಬದ್ಧವಾಗಿ ನಡೆದರೆ ಮಾತ್ರ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಸರ್ಕಾರಕ್ಕೆ ನಮ್ಮ ಬೆಂಬಲ ಎಂದು ಜಾಹೀರು ಮಾಡಿದರು.

ಮುಖ್ಯ ಮುಖ್ಯ ಸಮಿತಿಗಳಲ್ಲಿ ತಮಗೆ ಅಧ್ಯಕ್ಷ ಸ್ಥಾನವನ್ನು ಕೊಡಬೇಕು.

ಅಧ್ಯಾಪಕರನ್ನು, ಅಧಿಕಾರಿಗಳನ್ನು ಖಾಲಿ ಹುದ್ದೆಗಳಲ್ಲಿ ತುಂಬಬೇಕು.

ಮೇಲಿನ ಹಂತಗಳಲ್ಲಿ ಮಾತ್ರವಲ್ಲ ಕೆಳಗಿನ ಹಂತಗಳಲ್ಲಿ ಕೂಡ ಜಿಲ್ಲೆ ಮತ್ತು ತಾಲ್ಲೂಕು ಹಂತಗಳಲ್ಲಿ ನಮ್ಮ ಪಕ್ಷದೊಡನೆ ಸಮಾಲೋಚನಾ ಸಮಿತಿಗಳನ್ನು ರಚಿಸಬೇಕು.

ಜನತಾ ಸರ್ಕಾರವು ನಿರ್ವೀರ್ಯವಾಗಿದೆ ಅದನ್ನು ಸಮರ್ಥಗೊಳಿಸುವುದೇ ನಮ್ಮ ಉದ್ದೇಶ ಎಂದು ಇವರ ಪ್ರಚಾರ.

ಶ್ರೀ ರಾಮಕೃಷ್ಣ ಹೆಗ್ಗಡೆಯವರು ಬಿ. ಜೆ. ಪಿ. ಯವರ ನಿರ್ಣಾಯಕ 18 ಸದಸ್ಯರುಎಂದು ಹೇಳುತ್ತಾ ಹಲವಾರು ಕ್ರಮಗಳನ್ನು ಅವರಿಗೆ ಅನುಕೂಲವಾಗುವಂತೆ ಕೈಗೊಳ್ಳುತ್ತಾ ಬಂದಿದ್ದಾರೆ ಎಂಬುದಂತೂ ಸತ್ಯ.

ಇತ್ತೀಚೆಗೆ ಎರಡು ಕಾರ್ಪೊರೇಷನ್‌ಗಳಲ್ಲಿ ಮೈಸೂರು ಮತ್ತು ಹುಬ್ಬಳ್ಳಿ—ಧಾರವಾಡಗಳಲ್ಲಿ ಜನತಾ—ಭಾರತೀಯ ಜನತಾ ಪಕ್ಷಗಳ ಪರಸ್ಪರ ಬೆಂಬಲದಿಂದ ಬಿ. ಜೆ. ಪಿ. ಯವರಿಗೆ ಉಪ-ಮೇಯರ್ ಸ್ಥಾನ ದಕ್ಕಿದುದು, ಬೆಂಗಳೂರಿನಲ್ಲಿ ಕೂಡ ಉಪಮೇಯರ್ ಸ್ಥಾನಕ್ಕಾಗಿ ಪಟ್ಟುಹಿಡಿದುದು, ಅದರಲ್ಲಿಯೂ ಇತ್ತೀಚೆಗೆ ಮತೀಯ ಗಲಭೆಗಳಿಗೆ ಪಕ್ಕಾದ ಹುಬ್ಬಳ್ಳಿಯಲ್ಲಿಯೇ ಅವರು ಉಪಮೇಯರ್ ಸ್ಥಾನದಲ್ಲಿರುವುದು ಅಲ್ಪಸಂಖ್ಯಾತರಿಗೆ, ಹಿಂದುಳಿದ ಜಾತಿಗಳಿಗೆ ಆತಂಕಕ್ಕೆ ಕಾರಣವಾಗಿದೆ

ಇವೆಲ್ಲದರಿಂದ ರಾಜ್ಯದಲ್ಲಿ ಜನತಾ ಸರ್ಕಾರದ ಪ್ರತಿಬಿಂಬದ ಮೇಲೆ ಜಾತೀಯ ಸಂಪ್ರದಾಯ ಬದ್ಧತೆಯು ಹಂಗು ಬೀಳುವಂತಾಯಿತು. ಈ ಸರ್ಕಾರ ಜನಸಾಮಾನ್ಯರಿಂದ ದೂರವಿದೆ ಎಂಬ ಭಾವನೆಗೆ ಇಂಬುಸಿಕ್ಕಿತು.

ಕಾಂಗ್ರೆಸ್ ಪಕ್ಷದ ಪ್ರಚಾರ, ಅಜೀಜ್ ಸೇಠ್ ರವರ ಪ್ರಚಾರ, ರುದ್ರಪ್ಪನವರ ರಾಜ್ಯ ರೈತ ಸಂಘದ ಹೆಗ್ಗಡೆ ಚಲೇ ಜಾವ್ ಕಾರ್ಯಕ್ರಮ ಮತೀಯ ವಾದಿಗಳ ಪ್ರಚಾರ ಮತ್ತು ಗಲಭೆಗಳು ದಲಿತ ಸಂಘರ್ಷ ಸಮಿತಿಯವರ ಪ್ರಚಾರ, ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗದ ಪ್ರಚಾರ ಇವೆಲ್ಲದರ ಜೊತೆಗೆ ಜನತಾ ಸರ್ಕಾರದ ಸಾಧನೆಗಳನ್ನು ಪ್ರಚಾರ ಮಾಡುವುದಕ್ಕೆ ಜನತಾ ಪಕ್ಷಕ್ಕೊಂದು ವ್ಯಾಪಕ ಯಂತ್ರವೇ ಇಲ್ಲದಿರುವುದು ಸರ್ಕಾರಿ ಯಂತ್ರದಿಂದಲೂ, ಪತ್ರಿಕೆಗಳಿಂದಲೂ ಪ್ರಚಾರ ಇಲ್ಲದಿರುವುದು ಇವುಗಳಿಂದಲೂ ಈ ಭಾವನೆಗೆ ಇಂಬು ಸಿಕ್ಕಿದೆ.

ಇದರ ಜೊತೆಗೆ ಸಿ ಪಿ ಐ ಜನತಾ ಸರಕಾರಕ್ಕೆ ಬೆಂಬಲ ನೀಡುತ್ತಿದ್ದರೂ ಆಗಾಗ್ಗೆ ಒಂದಲ್ಲ ಒಂದು ಪ್ರಶ್ನೆಯ ನೆಪದಲ್ಲಿ ತಮ್ಮ ಬೆಂಬಲವನ್ನು ಹಿಂತೆಗೆದುಕೊಳ್ಳುತ್ತೇವೆ ಎಂದು ಆಗಾಗ್ಗೆ ಕೆಲವು ಬೀದಿ ಪಾಲಾಗುತ್ತಿರುವುದು, ಲಕ್ಷಾಂತರ ಬಡ ರೈತರ ಮತ್ತು ಕೃಷಿ ಕೂಲಿಕಾರರ ಮತ್ತು ಅಕ್ರಮವಾಗಿ ಬಂಜರು ಭೂಮಿ ಹಿಡಿದವರ ಹಕ್ಕು ರಕ್ಷಣೆಯ ಬಗ್ಗೆ, ರೈತರ ಬೆಳೆಗಳಿಗೆ ನ್ಯಾಯ ಬೆಲೆಗಳನ್ನು ಒದಗಿಸುವುದರ ಬಗ್ಗೆ ರೈತರ ಸಾಲ ರದ್ದತಿಯ ಬಗ್ಗೆ, ಬಡವರಿಗೆ ವಸತಿ ನಿರ್ಮಾಣದ ಬಗ್ಗೆ, ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು ರಾಜ್ಯದಲ್ಲಿ ಚಳುವಳಿ ಹೂಡಿದವು.

ಸಿ ಐ ಟಿ ಯು ರಾಜ್ಯ ಸಮ್ಮೇಳನವು ಮಂಗಳೂರಿನಲ್ಲಿ ಅತ್ಯಂತ ದೊಡ್ಡ ರೀತಿಯಲ್ಲಿ ಸಾಮೂಹಿಕವಾಗಿ ಜನರನ್ನು ಆಕರ್ಷಿಸುವ ರೀತಿಯಲ್ಲಿ ನಡೆಯಿತು. ಕಾರ್ಮಿಕ ವರ್ಗದ ರಾಜ್ಯದ ರಾಜಕೀಯ ಆಗುಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ, ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿಯಾದ ಕಾಂಗ್ರೆಸ್ (ಐ) ನೀತಿಗಳನ್ನು ಸೋಲಿಸುವ ದಿಶೆಯಲ್ಲಿ ಕಾರ್ಯಾಚರಣೆಗೆ ಮುಂದಾಗಬೇಕೆಂದು ಕರೆ ನೀಡಲಾಯಿತು.

ಸಿಐಟಿಯು ಬೆಂಬಲದಿಂದ ರಾಜ್ಯಾದ್ಯಂತ ಪ್ರಾಂತ ರೈತ ಸಂಘವು

ಪಂಜಾಬಿನ ಬಿಕ್ಕಟ್ಟು ರಾಜ್ಯದ ಮೇಲೆ ಮಿಶ್ರ ಪರಿಣಾಮಗಳನ್ನು ಉಂಟು ಮಾಡಿದ ವೇಳೆಯಲ್ಲಿಯೇ ಕೇಂದ್ರ ಸಮಿತಿಯ ಅತ್ಯಂತ ಸಾಮಯಿಕ ತೀರ್ಮಾನದ ಮೇರೆಗೆ ಕಾಂ. ಸುರ್ಜಿತ್‌ರವರ ಬೆಂಗಳೂರಿನ ಬಹಿರಂಗ ಸಭೆ, ಅಲ್ಲಲ್ಲಿ ಪಂಜಾಬ್ ವಾರಾಚರಣೆ, (ಕೋಲಾರ ಜಿಲ್ಲೆಯ ಶಿಡ್ಲಘಟ್ಟ ರಾಯಚೂರು ಮಂಗಳೂರು) ಇದರಿಂದ ಕಾಂಗ್ರೆಸ್ (ಐ)ನ ಪಾತ್ರವನ್ನು ಬಯಲಿಗೆಳೆಯಲು ಸಾಧ್ಯವಾಯಿತು. ಬೆಂಗಳೂರಿನ ಸಭೆ ನಿರೀಕ್ಷೆಗೂ ಮೀರಿ ಯಶಸ್ವಿಯಾಯಿತು. ಬೆಂಗಳೂರು ಸಿಖ್ ಜನಾಂಗದ ಧಾರ್ಮಿಕ ಮುಖಂಡರು ಈ ಸಭೆಗೆ ಬಂದಿದ್ದುದು ಗಮನಾರ್ಹ.

ಅದೇ ವೇಳೆ ಮಂತ್ರಿ ಮಂಡಲ ವಿಸ್ತಾರವಾಗದಿರುವುದನ್ನು ಸಹಿಸಲಾಗದೆ 38 ಮಂದಿ ಜನತಾ ಎಂ ಎಲ್ ಎಗಳು ನಾಲ್ಕು ಮುಖ್ಯ ಮುಂದಾಳುಗಳ ಸಮಕ್ಷಮದಲ್ಲಿ ಬಹಿರಂಗವಾಗಿ ಸಭೆ ಸೇರಿ "ಎಲ್ಲಾ ಮಂತ್ರಿಗಳೂ ಕೂಡಲೇ ರಾಜೀನಾಮೆ ಕೊಟ್ಟು" ರಾಮಕೃಷ್ಣ ಹೆಗ್ಗಡೆಯವರ ಕೈಗಳನ್ನು ಬಲಪಡಿಸಬೇಕೆಂದು, ಅವರಿಗೆ ಮಂತ್ರಿ ಮಂಡಲ ಪುನರ್ರಚಿಸಲು ಮುಕ್ತದಾರಿ ಒದಗಿಸ

ಮಸೂದೆಯು ರಾಷ್ಟ್ರಪತಿಯವರ ಅಂಗೀಕಾರ ಪಡೆಯದಿರುವುದರಿಂದ ಗ್ರಾಮೀಣ ಪ್ರದೇಶದ ಸ್ವಯಮಾಡಳಿತ ಸಂಸ್ಥೆಗಳು ಪಂಚಾಯಿತಿಗಳು ಮತ್ತು ತಾಲ್ಲೂಕ್ ಅಭಿವೃದ್ಧಿ ಮಂಡಳಿಗಳು ಆಡಳಿತಾಧಿಕಾರಿಗಳ ಕೈಯಲ್ಲೇ ಉಳಿದು, ಆಗಬಹುದಾದ ಪೌರಾನುಕೂಲ ಕೆಲಸಗಳಿಗೂ ಆತಂಕವಾಗಿದೆ ಅಧಿಕಾರಿಗಳ ನಿಷ್ಕ್ರಿಯ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಈ ಪರಿಸ್ಥಿತಿ ಗ್ರಾಮಾಣ ಪ್ರದೇಶಗಳಲ್ಲಿ ಒಂದು ರೀತಿಯ ಶೂನ್ಯತೆಯನ್ನು ಉಂಟು ಮಾಡಿದೆ.

ಅದೇ ರೀತಿಯಲ್ಲಿ ಶಿಕ್ಷಣ ಮಸೂದೆ ಕೂಡ ರಾಷ್ಟ್ರಪತಿಯವರ ಅಂಗೀಕಾರ ಪಡೆದಿಲ್ಲ. ಇಂತಹ ಸಂದರ್ಭದಲ್ಲಿ ರಾಷ್ಟ್ರಪತಿಗಳ ಅಂಗೀಕಾರಕ್ಕಾಗಿ ಒತ್ತಡ ತರುವ, ತಾನೇ ಕೈಗೊಂಡ ಪ್ರಗತಿಪರ ಕ್ರಮಗಳಿಗೆ ಕೇಂದ್ರದ ಕಾಂಗ್ರೆಸ್ ಸರಕಾರ ಒಡ್ಡುತ್ತಿರುವ ಅಡಚಣೆಗಳನ್ನು ಜನರಿಗೆ ವಿವರಿಸುವ ಕೆಲಸವನ್ನು ಜನತಾ ಪಕ್ಷ ಕೈಗೊಳ್ಳದಿರುವುದು ಇಡೀ ರಾಜ್ಯದ ಜನತೆಯನ್ನು ಅಜ್ಞಾನದಲ್ಲಿಡುವುದೇ ಅಲ್ಲದೆ, ಅವರ ಅತೃಪ್ತಿ ಜನತಾ ಸರಕಾರದ ಮೇಲೆಯೇ ತಿರುಗುವುದಕ್ಕೆ ಕಾರಣವಾಗುತ್ತದೆ.

ಇದೇ ಸಂದರ್ಭವೆಂದು ಕಾಂಗ್ರೆಸ್ (ಐ) ತೀರ್ಮಾನಿಸಿತು. ಅಷ್ಟರವರೆಗೆ 18 ಮಂದಿ ಎಂ. ಎಲ್. ಎ. ಗಳನ್ನು ತೆಗೆದುಕೊಂಡು ದಿಲ್ಲಿಗೆ ಹೋಗಿ "ರಾಜ್ಯದಲ್ಲಿ ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷ ಕೆ. ಎಚ್. ಪಾಟೀಲರ ಮತ್ತು ರಾಜ್ಯ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾದ ವೀರಪ್ಪ ಮೊಯಿಲಿಯವರನ್ನು ಬದಲಿಸಬೇಕೆಂದು ಶ್ರೀಕಂಠಯ್ಯನವರು (ಹಿಂದೆ ದೇವರಾಜ ಅರಸು ಕಡೆಯಿಂದ ಗುಂಡೂರಾಯರ ಕಡೆಗೆ 80-85 ಜನ ಶಾಸಕರನ್ನು ಕೊಂಡೊಯ್ದ ಕಾಂಗ್ರೆಸ್ ಮುಂದಾಳು) ಇಂದಿರಮ್ಮನವರಿಗೆ ಮೊರೆಹೋಕಿದ್ದರ ವಿರುದ್ಧ ಅವರನ್ನೇ ಪಕ್ಷದಿಂದ ಉಚ್ಛಾಟಿಸುವ ಕುರಿತು ಬಿಸಿ ಬಿಸಿ ಚರ್ಚೆ, ಶೋಕಾಸ್ ನೋಟೀಸು ಇತ್ಯಾದಿ ನಡೆದಿತ್ತು.

ಕಾಂಗ್ರೆಸ್ ಹೈಕಮ್ಯಾಂಡ್'ನಿಂದ ಬಂದ ನಿರ್ದೇಶನದ ಪ್ರಕಾರ, ಅನೇಕ ರಾಜ್ಯಗಳಲ್ಲಿ ಗುಂಪು ಗುಂಪಾಗಿ ಒಡೆದಿರುವ ಕಾಂಗ್ರೆಸ್‌ನ ಇಮೇಜ್ ಅನ್ನು ಸರಿಪಡಿಸಲೆಂದು ಅನೇಕ ರಾಜ್ಯಗಳಲ್ಲಿ ನಡೆದ ಪ್ರಯತ್ನದ ಅಂಗವಾಗಿ ಈ ರಾಜ್ಯದಲ್ಲಿಯೂ ಕೆ. ಎಚ್. ಪಾಟೀಲ್ ವೀರಪ್ಪ ಮೊಯಿಲಿ, ಗುಂಡೂರಾವ್, ಶ್ರೀಕಂಠಯ್ಯನವರು ಪಕ್ಷ, ಕಾ ಗೋಷ್ಠಿಯ ಮುಂದೆ ನಾವೆಲ್ಲಾ ಒಂದೇ ಎಂದು ಸಾರಿದರು. ಗುಂಡೂರಾಯರಂತೂ ರಾಮಕೃಷ್ಣ ಹೆಗ್ಗಡೆಯವರ ಸರಕಾರ ತೀರ ಅಸಮರ್ಥ

(6ನೇ ಪುಟ ನೋಡಿ)

ಸಿ. ಪಿ. ಐ. [ಎಂ] ರಾಜ್ಯ ಸಮಿತಿಯ ನಿರ್ಣಯಗಳು

ಧಮಕಿ ಹಾಕುವುದು, ಅದರಲ್ಲಿಯೂ ಬಿ ಜೆ ಪಿ ಯವರ ಜೊತೆ ಸಮಾಲೋಚನೆ ಮಾಡಿದರೆ, ನಾವು ಖಂಡಿತವಾಗಿಯೂ ಬೆಂಬಲ ಹಿಂತೆಗೆದುಕೊಳ್ಳುತ್ತೇವೆ. ಎಂದು ಬೆದರಿಸುವುದು ನಡೆದಿದೆ. ಅವರ ಪ್ರಚಾರದ ವೈಖರಿ ಕೂಡಾ ಜನತಾ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಕೆಲವೊಮ್ಮೆ ಕಾಂಗ್ರೆಸ್ ಸರಕಾರವು ಇದಕ್ಕಿಂತ ಮೇಲು ಎನ್ನುವ ಭಾವನೆ ಹುಟ್ಟಿಸುವ ದನ್ನೂ ಆ ಪಕ್ಷ ಹಿಂಜರಿಯಲಿಲ್ಲ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಇತರ ಸಾಮೂಹಿಕ ಸಂಘಟನೆಗಳು ಸತತವಾಗಿ ಜನತಾ ಸರಕಾರದ ಮೇಲೆ ನಡೆಯುವ ಸತ್ಯಕ್ಕೆ ದೂರವಾದ ಪ್ರಚಾರಗಳ ಬಗ್ಗೆ ಜನತೆಯನ್ನು ಎಚ್ಚರಿಸುವ ವೇಳೆಯಲ್ಲಿಯೇ ಈ ಸರಕಾರದ ಮುಂದೆ ರೈತರ ಮತ್ತು ಕೂಲಿಕಾರರ ವಿಶಿಷ್ಟ ಮತ್ತು ಮಹತ್ವದ ಪ್ರಶ್ನೆಗಳನ್ನು ಮುಂದಿಟ್ಟು, ಪ್ರಚಾರ ಪ್ರಕ್ಷೋಭೆ ಮತ್ತು ಚಳುವಳಿಯನ್ನು ನಡೆಸುತ್ತಾ ಬಂದಿದೆ. ಬಲ ಕಮ್ಯೂನಿಸ್ಟ್ ಪಕ್ಷವೂ ಅವರ ಸಂಘಟನೆಗೊಳಿಸುವಲ್ಲಿ ಕೆಲಸ ಮಾಡಿದೆ. ಮುಖ್ಯವಾಗಿ ಲಕ್ಷಾಂತರ ಕಾರ್ಮಿಕರಿಗೆ, ಕೃಷಿ ಕೂಲಿಕಾರರನ್ನು ಸೇರಿಸಿ ಕನಿಷ್ಠ ಕೂಲಿ ಜಾರಿಯಾಗದೇ ಇರುವುದು, ಕಾರ್ಮಿ

11-6-1984 ರಂದು ನಡೆಸಿದ ಸಾಮೂಹಿಕ ಪಿಕೆಟಿಂಗ್ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿತ್ತು. 17 000 ಮಂದಿ ದಸ್ತಗಿರಿಯಾದುದು, 25 35 ಸಾವಿರದಷ್ಟು ಮಂದಿ ಪ್ರದರ್ಶನ ಮಾಡಿದುದು, ಲಕ್ಷದವರೆಗೆ ಕಾರ್ಮಿಕರು ಮುಷ್ಕರ ಹೂಡಿದುದು, ಈ ಕಾರ್ಯಕ್ರಮದ ವಿಶೇಷತೆ. ಸಾಮೂಹಿಕ ಚಳುವಳಿಯಲ್ಲಿ ಸಂಘಟಿತ ಕಾರ್ಮಿಕರ ಮತ್ತು ರೈತರ ಮಧ್ಯೆ ಇದು ಹೊಸ ಉತ್ಸಾಹ ಮತ್ತು ವಿಶ್ವಾಸಗಳನ್ನು ಮೂಡಿಸಿದೆ.

ಈ ಸಾಮೂಹಿಕ ಒತ್ತಡದ ಫಲವಾಗಿ ರಾಮಕೃಷ್ಣ ಹೆಗ್ಗಡೆಯವರ ಸರಕಾರವು "ಹಿಂದಿನಿಂದಲೂ ಅಕ್ರಮಿಸಿಕೊಂಡ ಭೂಮಿಯಿಂದ ಬಡ ಜನರನ್ನು ಎಬ್ಬಿಸಬಾರದೆಂಬ ನೀತಿಯನ್ನು ರೂಪಿಸುದಕ್ಕೆ ಕ್ರಮ ಕೈಗೊಳಲಾಗುತ್ತಿದೆ" ಎಂದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ. ಆದರೂ ಸಹ ಇಲ್ಲಿಯವರೆಗೆ ಜಮೀನು ಸಕ್ರಮಗೊಳಿಸುವ ಘೋಷಣೆಯನ್ನು ಕಾರ್ಯಗತಗೊಳಿಸುವ ಕ್ರಮ ಕೈಗೊಂಡಿಲ್ಲ. ಇದನ್ನು ಸಾಧಿಸಬೇಕಾದರೆ ರೈತ ಸಂಘವು ಸತತವಾಗಿ ಒತ್ತಡ ಹಾಕಬೇಕಾಗುತ್ತದೆ. ಮತ್ತು ಹೋರಾಟವನ್ನು ಮುಂದುವರಿಸಬೇಕಾಗುತ್ತದೆ.

ಬೇಕೆಂದು ಠರಾವು ಮಾಡಿದರು. ಈ ಠರಾವು ಮತ್ತು ಹೇಳಿಕೆಯು ರಾಜ್ಯದಲ್ಲಿ ತೀವ್ರ ಗೊಂದಲಕ್ಕೆ ದಾರಿ ಮಾಡಿತು.

ಮಂತ್ರಿಗಳು ಒಬ್ಬರ ನಂತರ ಒಬ್ಬರಂತೆ ಸ್ವಲ್ಪ ಹಿಂಜರಿಯುತ್ತಲೇ ರಾಜೀನಾಮೆಯನ್ನು ರಾಮಕೃಷ್ಣ ಹೆಗ್ಗಡೆಯವರಿಗೆ ಕೊಟ್ಟರು.

ಶ್ರೀಮಾನ್ ಅಜೀಜ್ ಸೇಠ್‌ರವರು ಶ್ರೀಮತಿ ಚಂದ್ರಪ್ರಭಾ ಅರಸುರವರು ರಾಜೀನಾಮೆ ಬರೆದು ಕೊಡದಾಗ ಅವರ ಮೇಲೆ ತೀವ್ರ ಒತ್ತಡ ಬಿದ್ದು ಅವರು ಬರೆದು ಕೊಡಬೇಕಾಗಿ ಬಂತು.

ಕೊನೆಯಲ್ಲಿ ಅವರು ಏಕಾಏಕಿಯಾಗಿ ಜನತಾ ಪಕ್ಷಕ್ಕೂ ರಾಜೀನಾಮೆ ಕೊಟ್ಟು "ಜನತಾ ಪಕ್ಷದ ಸರಕಾರವು ಅಲ್ಪಸಂಖ್ಯಾತರಿಗೂ ಹಿಂದುಳಿದ ಜನ ವಿಭಾಗಗಳಿಗೂ ಏನೂ ಮಾಡದ ಸರಕಾರ" ಎಂದು ಆರೋಪಿಸಿ ಹೊರ ನಡೆದರು. ಈ ರೀತಿ ಮಂತ್ರಿ ಮಂಡಲ ವಿಸ್ತರಣೆ ಜನತಾ ಸರಕಾರ ಸ್ಥಗಿತವಾಗುವುದಕ್ಕೆ ಕಾರಣವಾಯಿತು.

ಅದೇ ವೇಳೆಯಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ವ್ಯವಸ್ಥೆಯ ಹಲವು ಸ್ವಾಗತಾರ್ಹ ಅಂಶಗಳನ್ನು ಜಾರಿಗೆ ತರಲುದ್ದೇಶಿಸಿರುವ ಜಿಲ್ಲಾ ಪರಿಷದ್

— ಬಿ. ಟಿ. ರಣದಿವೆ

ಮಾರ್ಕ್ಸ್‌ವಾದ ಮತ್ತು ಭಾರತದಲ್ಲಿ ದೇಶೀಯತೆಯ ಪ್ರಶ್ನೆ | 5

ಕೇಂದ್ರ - ರಾಜ್ಯ ಸಂಬಂಧಗಳ ಪುನರ್‌ರಚನೆ

ಪ್ರಜಾಪ್ರಭುತ್ವವಾದೀ ಬೇಡಿಕೆ - ಸಂಕುಚಿತವಾದೀ ಬೇಡಿಕೆಯಲ್ಲ

ಕಳೆದ ಸಂಚಿಕೆಗಳಲ್ಲಿ....

1. ದೇಶೀಯ ಗುಂಪುಗಳ (ಅಥವಾ ಭಾರತದ ಸಂದರ್ಭದಲ್ಲಿ ಭಾಷಾ ಜನಾಂಗಗಳ ಸ್ವರೂಪ ಪಡೆದಿರುವ) ಸಮಸ್ಯೆಯ ಬಗ್ಗೆ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಹಾಗೂ ಸ್ಟಾಲಿನ್ನರ ವಿಚಾರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಮಾರ್ಕ್ಸ್‌ವಾದೀ—ಲೆನಿನ್‌ವಾದೀ ನಿಲುವನ್ನು ಪ್ರಸ್ತುತ ಪಡಿಸಲಾಗಿತ್ತು.

2. ನವ ವಿಮೋಚಿತ ದೇಶವಾದ ಭಾರತದಲ್ಲಿ ಈ ಸಮಸ್ಯೆಯ ಸ್ವರೂಪವನ್ನು, ಅದರ ಚಾರಿತ್ರಿಕ ಹಿನ್ನೆಲೆಯನ್ನು ಪರಿಶೀಲಿಸುತ್ತಾ, ಇದನ್ನು ಎದುರಿಸುವಲ್ಲಿ ಇತರ ವರ್ಗಗಳ ದೌರ್ಬಲ್ಯ ಹಾಗೂ ಕಾರ್ಮಿಕ ವರ್ಗದ ವಿಶಿಷ್ಟ ಪಾತ್ರವನ್ನು ವಿಶ್ಲೇಷಿಸಲಾಗಿತ್ತು.

3. ಭಾರತದ ಭಾಷಾ ಜನಾಂಗಗಳ ಪ್ರಶ್ನೆಯ ಮೂರು ಆಯಾಮಗಳನ್ನು —1. ಅಸಮಾನ ಆರ್ಥಿಕ ಬೆಳವಣಿಗೆ 2 ಭಾಷಾ ಸಮಾನತೆಯ ಭರವಸೆ ಹಾಗೂ 3. ಕೇಂದ್ರದೊಂದಿಗೆ ರಾಜ್ಯಗಳ ಸಮಾನ ಪಾಲುದಾರಿಕೆ—ಗುರುತಿಸಲಾಗಿತ್ತು. ಬ್ರಿಟಿಶ್ ಆಳ್ವಿಕೆಯಲ್ಲಿ ಉದ್ಭವಗೊಂಡ ಕೈಗಾರಿಕಾ ಅಸಮತೋಲನ ಹೇಗೆ ಸ್ವಾತಂತ್ರ್ಯ ನಂತರ ಬಂಡವಾಳ ಶಾಹೀ ಮಾರ್ಗ ಅನುಸರಿಸಿದುದರಿಂದ ಮತ್ತಷ್ಟು ಹೆಚ್ಚಿ ಪ್ರಾಂತೀಯ ಸಂಕುಚಿತವಾದಿಗಳು ಪ್ರತಿಕ್ರಿಯಾವಾದಿಗಳು, ಅದರ ದುರ್ಲಾಭ ಪಡೆಯುವಂತಾಯಿತು. ಭಾಷಾ ಸಮಾನತೆಯ ಅಗತ್ಯವನ್ನು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಕಾಂಗ್ರೆಸ್ ನಾಯಕರು ಒಪ್ಪಿಕೊಳ್ಳಬೇಕಾಗಿ ಬಂದರೂ, ಸ್ವಾತಂತ್ರ್ಯ ನಂತರ ತಮ್ಮ ಸಂಕುಚಿತ ವರ್ಗ ಹಿತಾಸಕ್ತಿಗಳಿಂದಾಗಿ ಬೂರ್ಜ್ವಾ—ಭೂಮಾಲಕ ಆಳರಸರು ಹೇಗೆ ಇದನ್ನು ನಿರಾಕರಿಸಿ ಹೊಸ ಸಮಸ್ಯೆಗಳನ್ನು ಸೃಷ್ಟಿಸಿದರು ಎಂಬುದನ್ನು ವಿವರಿಸಲಾಗಿತ್ತು.

ಕೇಂದ್ರ—ರಾಜ್ಯ ಸಂಬಂಧಗಳಿಗೆ ಸಂಬಂಧ ಪಟ್ಟಂತೆಯೂ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಸ್ವಾಯತ್ತತೆಯ ಬಗ್ಗೆ ಕಾಂಗ್ರೆಸ್ ಮುಖಂಡರು ತೋರಿದ ಉತ್ಸಾಹ ನಂತರ ಮಾಯವಾಗಿ ಹೇಗೆ ಅಧಿಕಾರದ ಕೇಂದ್ರೀಕರಣ ನಡೆಯಿತು ಎಂದು ವಿವರಿಸಲಾಗಿತ್ತು. ಬೂರ್ಜ್ವಾ—ಭೂಮಾಲಕ ವರ್ಗಗಳಿಂದ ಇದಕ್ಕಿಂತ ಭಿನ್ನವಾದುದೇನನ್ನೂ ನಿರೀಕ್ಷಿಸಲು ಅಸಾಧ್ಯ. ಆದರೆ ಭಾರತದ ಪ್ರಜಾಪ್ರಭುತ್ವ ಆಂದೋಲನ ಮತ್ತು ಕಾರ್ಮಿಕ ಆಂದೋಲನ ಕೂಡಾ ಈ ದಿಕ್ಕಿನಲ್ಲಿ ವಿಫಲವಾಯಿತು ... .ಮುಂದೆ ಓದಿ ....

ಆದರೆ ಎಲ್ಲಿ ದೇಶೀಯ ಸಮಾನತೆಯ ಹೋರಾಟವನ್ನು, ಪ್ರಜಾಪ್ರಭುತ್ವದ ವಿಸ್ತರಣೆಯ ಮತ್ತು ಆರ್ಥಿಕ ಮುನ್ನಡೆಯ ಸರ್ವಸಾಮಾನ್ಯ ಹೋರಾಟದೊಂದಿಗೆ, ಬೂರ್ಜ್ವಾ-ಭೂಮಾಲಕ ಸರಕಾರದ ಆಳ್ವಿಕೆಯ ವಿರುದ್ಧ ಎಲ್ಲರೂ ಸೇರಿ ನಡೆಸುತ್ತಿರುವ ಹೋರಾಟದೊಂದಿಗೆ ಒಂದಾಗೂಡಿಸಲು ಕಾರ್ಮಿಕ ವರ್ಗದ ಪಕ್ಷವಾದ ಸಿಪಿಐ (ಎಂ) ಗೆ ಸಾಧ್ಯವಾಗಿದೆಯೋ ಅಲ್ಲೆಲ್ಲಾ ಅಭೇದ್ಯ ಐಕ್ಯತೆ ಕೈಗೂಡಿದೆ. ಇದು ಬುಡಕಟ್ಟು ಜನಾಂಗೀಯ ಸಂಕುಚಿತತೆ ಮತ್ತು ಪ್ರತ್ಯೇಕತಾವಾದದ ಪ್ರಭಾವವನ್ನು ಎದುರಿಸಲು ಶಕ್ತವಾಗಿರುವ ಐಕ್ಯತೆ. ತ್ರಿಪುರಾದ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಹೇಳುತ್ತಿದ್ದೇವೆ. ಅಲ್ಲಿ ಸಿ.ಪಿ.ಐ. (ಎಂ) ಬುಡಕಟ್ಟುಗಳ ಜನಾಂಗಗಳ ಹೋರಾಟ ಮತ್ತು ಸಾರ್ವತ್ರಿಕ ಪ್ರಜಾಪ್ರಭುತ್ವ ಆಂದೋಲನ ಈ ಎರಡರದ್ದೂ ಮುಂದಾಳುತ್ವ ವಹಿಸುತ್ತಾ ಬಂದಿದ್ದು, ಬುಡಕಟ್ಟು ಜನತೆ ಹಾಗೂ ಬಂಗಾಲೀ ಜನಸಮೂಹ ಎರಡರದ್ದು ಬೆಂಬಲ್ಲ ಪಡೆದು ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ)ನ್ನು ಸೋಲಿಸಲು, ಎಡರಂಗ ರಚಿಸಲು ಅದಕ್ಕೆ ಸಾಧ್ಯವಾಯಿತು; ಸ್ವಾಯತ್ತ ಜಿಲ್ಲಾ ಬುಡಕಟ್ಟು ಪರಿಷತ್ತನ್ನು ಆರಂಭಿಸುವ ಮೂಲಕ ಪ್ರತ್ಯೇಕತಾವಾದೀ ಬುಡಕಟ್ಟು ತತ್ತ್ವಗಳ ಹಲ್ಲೆಯನ್ನು, ಸಶಸ್ತ್ರ ಹಲ್ಲೆಯನ್ನು ವಿಫಲಗೊಳಿಸಲು ಅದು ಶಕ್ತವಾಯಿತು.

ಅಸ್ಸಾಂ-ಸಂಕುಚಿತವಾದಿಗಳ ಬಲೆಯಲ್ಲಿ

ವಿಘಟನಾ ಪ್ರಕ್ರಿಯೆಯನ್ನು ಅಸ್ಸಾಂನಲ್ಲಿನ ಕಳವಳಕಾರೀ ಬೆಳವಣಿಗೆಗಳು ಇನ್ನಷ್ಟು ಹತ್ತಿರ ತಂದಿವೆ. ಅಸ್ಸಾಂ ಅಖಿಲ-ಭಾರತ ಸಾಮ್ರಾಜ್ಯಶಾಹೀ-ವಿರೋಧೀ ಹೋರಾಟದ ಒಂದು ಭಾಗವಾಗಿತ್ತು. ಆದರೆ ಇಂದು ಅಸ್ಸಾಮೀ-ಭಾಷಿಗಳ ಸಾಕಷ್ಟು ಸಂಖ್ಯೆಯ ಒಂದು ವಿಭಾಗ ಬಹಿರಂಗವಾಗಿಯೇ ಭಾರತ ವಿರೋಧೀ ನಿಲುವು ತಳೆದಿರುವ ಸಂಕುಚಿತವಾದಿಗಳ ಬಲೆಗೆ ಬಿದ್ದಿದೆ. ವಿದೇಶೀ ವಲಸೆಗಾರರ ಪ್ರಶ್ನೆಯನ್ನು ವಿಕೃತಗೊಳಿಸಿ ರಾಷ್ಟ್ರದ ಇತರ ಭಾಗಗಳಿಂದ ಬಂದ ಭಾರತೀಯ ನಾಗರಿಕರ ಬಗ್ಗೆ ಮತ್ತು ಆಗಾಗ ಅಸ್ಸಾಂನಲ್ಲಿ ವಾಸವಾಗಿರುವ ಅಸ್ಸಾಮೇತರ ಭಾಷೆಯಾಡುವ ಜನರ ಬಗ್ಗೆ ಪಕ್ಷಪಾತಪೂರ್ಣ ಹಾಗೂ ವೈರತ್ವಪೂರ್ಣ ಭಾವನೆ ಸೃಷ್ಟಿಸಲಾಗುತ್ತಿದೆ. ಈ ಸಂಕುಚಿತವಾದ ಅಲ್ಪ ಸಂಖ್ಯಾತರ- ಅಸ್ಸಾಂನ ಮುಸ್ಲಿಮರು ಮತ್ತು ಬುಡಕಟ್ಟು ಜನರ-ಸಾಮೂಹಿಕ ಹತ್ಯೆಗೆ ದಾರಿ ಮಾಡಿಕೊಟ್ಟಿತು. ಬಂಧುಗಳ ನಡುವಿನ ಈ ಯುದ್ಧದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜನ ಕೊಲೆಯಾದರು. "ಭಾರತೀಯರೇ, ಹಿಂದಿರುಗಿ", "ಅಸ್ಸಾಮಿಯೇತರರನ್ನೂ ಸಾಮಾಜಿಕವಾಗಿ, ಆರ್ಥಿಕವಾಗಿ ಬಹಿಷ್ಕರಿಸಿ" "ನಮಗೆ ಸಾರ್ವಭೌಮತೆ ಬೇಕು" ಇತ್ಯಾದಿ ಗೌಹಾಟಿಯ ಗೋಡೆಗಳ ಮೇಲಿನ ಘೋಷಣೆಗಳು ಸಂದರ್ಶಕರಿಗೆ ಇರುಸು-ಮುರುಸು ಉಂಟು ಮಾಡುತ್ತಿವೆ ಎಂದು ಕೆಲವು ತಿಂಗಳ ಹಿಂದೆ ಒಂದು ಪ್ರಮುಖ ಇಂಗ್ಲೀಷ್ ದೈನಿಕ ವರದಿಮಾಡಿತ್ತು.

"ಸ್ವಾಭಾವಿಕವಾಗಿಯೇ ಇಲ್ಲಿನ ಒಂದು ಬೃಹತ್ ಸಾರ್ವಜನಿಕ ವಲಯದ ಕೈಗಾರಿಕೆಯಲ್ಲಿ ಯಾವುದೇ ಸ್ಥಳೀಯ, ಯುವಕ, ಸುಯೋಗ್ಯ ಇಂಜಿನಿಯರುಗಳನ್ನು ಸೇರಿಸಿಕೊಳ್ಳುವುದು ಸಾಧ್ಯವಿಲ್ಲದೇ ಇರುವಾಗ, ಒಂದು ರಾಷ್ಟ್ರೀಕೃತ ಬ್ಯಾಂಕ್ ಆಯ್ದ ನಲ್ವತ್ತು ಜನರಲ್ಲಿ ಕೇವಲ ಇಬ್ಬರು ಸ್ಥಳೀಯರು ಮಾತ್ರ ಇರುವಾಗ ಅದು ಭಾಷಾ ಅಸಂತುಷ್ಟಿಯ ಪ್ರಶ್ನೆಯಾಗಿ ಬಿಟ್ಟು ಎಲ್ಲಾ ಕಡೆಗಳಿಂದಲೂ ಸಹಾನುಭೂತಿ ಗಳಿಸಬಹುದು"

ಸಾಮ್ರಾಜ್ಯಶಾಹೀ ಸಂಚು

ಬೂರ್ಜ್ವಾ-ಭೂಮಾಲಕ ಆಳ್ವಿಕೆಯಲ್ಲಿ ಬಂಡವಾಳಶಾಹೀ ಮಾರ್ಗಾವಲಂಬನೆಯ ಫಲವಾಗಿ, ದೊಡ್ಡ ಬಂಡವಾಳದ ಮಾಲಕರ ಭೇದ-ಭಾವದ ವರ್ತನೆಯಿಂದಾಗಿ ಹುಟ್ಟಿಕೊಳ್ಳುವ ಅಪರಿಹಾರ್ಯ ನಿರುದ್ಯೋಗ ಮತ್ತು ಹಿಂದುಳಿಕೆ ಒಂದು ಸಾಚಾ ದೇಶೀಯ ಭಾವನೆಯನ್ನು ವಿಚ್ಛಿದ್ರಕಾರೀ ಮಾರ್ಗದತ್ತ ತಿರುಗಿಸಿ ಜನಸಾಮಾನ್ಯರಿಗೆ ತೊಂದರೆಯುಂಟು ಮಾಡುತ್ತದೆ. ಈ ಮಾರ್ಗಚ್ಯುತಿ ಸಾರ್ವತ್ರಿಕ ಪ್ರಜಾಪ್ರಭುತ್ವ ಚಳುವಳಿ ಹಾಗೂ ವರ್ಗ ಹೋರಾಟದ ನಡುವಿನ ದೇಶದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಎಲ್ಲಾ ಶ್ರಮಜೀವಿಗಳು ಬೂರ್ಜ್ವಾ-ಭೂಮಾಲಕ ಆಳ್ವಿಕೆಯ ವಿರುದ್ಧ ನಡೆಸುತ್ತಿರುವ ಹೋರಾಟದ ನಡುವಿನ ಕೊಂಡಿಯನ್ನು ಮುರಿದು ಅದನ್ನು ಛಿದ್ರಗೊಳಿಸುತ್ತದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳು ಈ ಸನ್ನಿವೇಶದ ಮೇಲೆ ತಮ್ಮ ಕಣ್ಣಿಟ್ಟಿದ್ದು ಅದನ್ನು ತಮ್ಮ ಲಾಭಕ್ಕೆ ಅನುಗೊಳಿಸಲು ಸಮಯ ಕಾಯುತ್ತಿದ್ದಾರೆ ಕೆಲವು ವಿದೇಶೀ ಕ್ರೈಸ್ತ ಮಿಶನರಿಗಳ ನೆರವಿನಿಂದ ಈ ಅಮೇರಿಕನ್ ಏಜೆಂಟರು ಅಸ್ಸಾಂನ ಪ್ರತ್ಯೇಕತೆಯ ಬಗ್ಗೆ ಪುಸ್ತಕಗಳನ್ನು ಬರೆಯುವುದರಲ್ಲಿ, ಅಸಂತೃಪ್ತಿಯನ್ನು ಪ್ರತ್ಯೇಕತಾವಾದೀ ಮಾರ್ಗದತ್ತ ಪ್ರಚೋದಿಸುವುದರಲ್ಲಿ ಮಗ್ನರಾಗಿದ್ದಾರೆ.

"ಪ್ರಾಜೆಕ್ಟ್ ಬ್ರಹ್ಮಪುತ್ರ"

Real Fact Of The Assam Agitation (ಅಸ್ಸಾಂ ಚಳುವಳಿಯ ನಿಜಸ್ವರೂಪ) ಎಂಬ ತಮ್ಮ ಕಿರುಹೊತ್ತಿಗೆಯಲ್ಲಿ ಪಿ. ರಾಮಮೂರ್ತಿಯವರು ಹೀಗೆ ಬರೆದಿದ್ದಾರೆ- "ಈಶಾನ್ಯ ಪ್ರದೇಶದಲ್ಲಿ ಅಮೇರಿಕಾದ ಕೇಂದ್ರಿಯ ಗುಪ್ತಚರ ಸಂಸ್ಥೆ (ಸಿ.ಐ.ಎ.) ದೀರ್ಘ ಕಾಲದಿಂದ ಸಕ್ರಿಯವಾಗಿದೆ. ಅದು ತನ್ನ ಏಜೆಂಟರಿಗೆ ಸಾಮಾಜಿಕ ಸೆಳೆತಗಳನ್ನು ಅಧ್ಯಯನ ಮಾಡಿ ಅದನ್ನು ಅಲ್ಪ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿನ ಸನ್ನಿವೇಶವನ್ನು ಅಸ್ಥಿರಗೊಳಿಸಲು ಹೇಗೆ ಬಳಸಬಹುದು ಎಂದು ತಿಳಿಸಬೇಕೆಂದು ನಿರ್ದೇಶನ ನೀಡಿತ್ತು. "ಪ್ರಾಜೆಕ್ಟ್ ಬ್ರಹ್ಮಪುತ್ರ" ಈಗ ಎಲ್ಲರಿಗೂ ತಿಳಿದಿರುವ ದಸ್ತಾವೇಜು. ಇದು ಸಂಯುಕ್ತ ಸಂಸ್ಥಾನ ಸಮಾಚಾರ ಸಂಸ್ಥೆ (ಯು.ಎಸ್.ಐ.ಎಸ್.) ಕಳಿಸಿರುವ "ಪ್ರಾಜೆಕ್ಟ್ ಬ್ರಹ್ಮಪುತ್ರ" ಎಂಬ ಶಿರೋನಾಮೆಯ ದಿ. 12 ಜುಲೈ 1979 ರ ಸುತ್ತೋಲೆ. ಗೃಹ ಇಲಾಖೆಯ [State Department] ಸಮ್ಮತಿ ಪಡೆದು ಜಾರ್ಜ್ ವಾಶಿಂಗ್ಟನ್ ವಿಶ್ವ ವಿದ್ಯಾಲಯದ ವಿಶೇಷ ಕಾರ್ಯಾಚರಣೆ ಸಂಶೋಧನಾ ಕಚೇರಿ (ಎಸ್.ಓ.ಆರ್.ಓ.) ಭಾರತದಲ್ಲಿನ ಅಮೇರಿಕನ್ ಸಂಸ್ಥೆ (ಸಿ.ಐ.ಎ. ಎಂದು ಓದಿಕೊಳ್ಳಿ) ಯನ್ನು ಭಾರತದ ಪೂರ್ವ ರಾಜ್ಯಗಳಲ್ಲಿ, ಸಿಕ್ಕಿಂ ಮತ್ತು ಭೂತಾನದಲ್ಲಿ, ಕೂಡಾ ಸಮಾಜಶಾಸ್ತ್ರೀಯ ಸಂಶೋಧನೆಯಲ್ಲಿ ನೆರವಾಗಲು ಕೇಳಿಕೊಂಡಿದೆ -ಎನ್ನುತ್ತದೆ ಈ ಸುತ್ತೋಲೆ. ಇದರ ಉದ್ದೇಶವೇನು ? "ಇದರ ಉದ್ದೇಶ- ಈ ರಾಜ್ಯಗಳ ಪ್ರಸ್ತುತ ಸ್ಥಾನಮಾನ ಎಷ್ಟರ ಮಟ್ಟಿಗೆ ಸ್ವೀಕಾರಾರ್ಹವಾಗಿ ಉಳಿದಿದೆ. ಅಥವಾ ಒಂದು ಹೊಸ ರಾಜ್ಯದನಿರ್ಮಾಣ ಒಂದು ಚಾಲ್ತೀ ಸಮಸ್ಯೆಯಾಗಿದೆಯೇ ಎಂಬುದಕ್ಕೆ ಏನಾದರೂ ಸೂಚನೆಗಳಿವೆಯೇ ಎಂಬುದನ್ನು ತೋರಿಸಿಕೊಡುವ ವಿಷಯದ ಮೇಲೆ ಬೆಳಕು ಚೆಲ್ಲುವುದು" (ಒತ್ತು ಸುತ್ತೋಲೆಯದ್ದೇ)

"ಸಂಕ್ಷಿಪ್ತವಾಗಿ, ಭಾರತದ ಈ ಪೂರ್ವ ರಾಜ್ಯಗಳಲ್ಲಿ ಪ್ರತಿಕ್ರಿಯಾವಾದೀ ಪ್ರತ್ಯೇಕತಾವಾದೀ ತತ್ತ್ವಗಳನ್ನು ಕಂಡು ಹಿಡಿದು.... ಒಂದು ಸ್ವತಂತ್ರ ರಾಜ್ಯಕ್ಕಾಗಿ ಚಳುವಳಿ ಆರಂಭಿಸುವಂತೆ ಅವಕ್ಕೆ ಧನ ಸಹಾಯ ನೀಡುವುದು."

"ಇಲ್ಲಿ ಈ ತಥಾಕಥಿತ ಸಂಶೋಧನೆಯ ಮೂಲಕ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಪ್ರಭಾವವನ್ನು ಹರಡುವುದೇ ಉದ್ದೇಶ ಎಂಬುದನ್ನು ಎಗ್ಗಿಲ್ಲದೆ ಒಪ್ಪಿಕೊಳ್ಳಲಾಗಿದೆ- "ಈ ಮಾದರಿಯ ಕೆಲಸವನ್ನು ಹಲವು ದೇಶಗಳಲ್ಲಿ ನಮ್ಮ ಸಂಘಟನೆ ನಡೆಸಿದೆ. ಇದರ ಫಲಿತಾಂಶ ತೃಪ್ತಿದಾಯಕವಾಗಿದೆ- ವಿಶೇಷವಾಗಿ ರಾಜಕೀಯ ಪರಿಸ್ಥಿತಿಯನ್ನು ಅಳೆಯುವುದರಲ್ಲಿ ಮತ್ತು ನಮ್ಮ ಪ್ರಭಾವಕ್ಕೆ ಅಲ್ಲಿ ಅನುಕೂಲಕರವಾದ ಅತ್ಯಂತ ಉತ್ತಮ ವಿಧಾನ ಕಂಡುಕೊಳ್ಳುವಲ್ಲಿ ಇದು ನೆರವಾಗಿದೆ" ಎನ್ನುತ್ತದೆ ಈ ಸುತ್ತೋಲೆ.

ಈ "ಪ್ರಾಜೆಕ್ಟ್ ಬ್ರಹ್ಮಪುತ್ರಾ" ವನ್ನು ಕಾರ್ಯರೂಪಕ್ಕೆ ತಂದು ಅಸ್ಸಾಂನಲ್ಲಿ ಪ್ರತ್ಯೇಕತಾವಾದೀ ಭಾವನೆಗಳನ್ನು ಉದ್ರೇಕಿಸುತ್ತಿದ್ದಾಗ, ಭಾರತದಲ್ಲಿ ಅಮೇರಿಕದ ರಾಯಭಾರಿ ಶ್ರೀಮಾನ್ ಗೋಹೀನ್ ಆಗಾಗ ಅಸ್ಸಾಂಗೆ ಹೋಗಿ ಬರುತ್ತಿದ್ದರು ಎಂಬುದು ಎಲ್ಲರಿಗೂ ತಿಳಿದ ವಿಷಯ. ಭಾರತ ಸರಕಾರ ಈ ಅಮಿತ್ರತ್ವಪೂರ್ಣ ವರ್ತನೆಯನ್ನು ಗಮನಿಸಿ ಈ ಭೇಟಿಗಳನ್ನು ನಿಲ್ಲಿಸಬೇಕಾಗಿ ಬಂದಿತ್ತು.

ಕಾಶ್ಮೀರ—ವಿಲಕ್ಷಣ ವೈಫಲ್ಯ

ಕಾಶ್ಮೀರದ ಬೆಳವಣಿಗೆಗಳು ಬೂರ್ಜ್ವಾ-ಭೂಮಾಲಕ ಸರಕಾರ ಅನುಸರಿಸುವ ರಾಜಕೀಯ ಬಗೆಗೊಂದು ವಿಲಕ್ಷಣ ಟಿಪ್ಪಣಿಯೇ ಸರಿ. ಉಕ್ಕೇರುತ್ತಿದ್ದ ಸ್ವಾತಂತ್ರ್ಯ ಹೋರಾಟದ ಫಲವಾಗಿ ಕಾಶ್ಮೀರದ ಜನತೆ ಶೇಖ್ ಅಬ್ದುಲ್ಲಾರ ನ್ಯಾಷನಲ್ ಕಾನ್ಫರೆನ್ಸ್‌ನ ಮುಂದಾಳುತ್ವದಲ್ಲಿ ಧಾರ್ಮಿಕ ಹಾಗೂ ಕೋಮು ಭಾವನೆಗಳನ್ನು ಮೀರಿ ನಿಂತು ಭಾರತದ ಸಾಮ್ರಾಜ್ಯಶಾಹೀ ವಿರೋಧಿ, ಪ್ರಜಾ ಪ್ರಭುತ್ವ ಚಳುವಳಿಯೊಂದಿಗೆ ಸೇರಿಕೊಂಡರು, ಭಾರತದಲ್ಲೇ ಉಳಿಯಲು ನಿರ್ಧರಿಸಿದರು. ಇದು ಧರ್ಮದ ಮೇಲೆ ಆಧಾರಿತ ಹಿಂದೂ ಮತ್ತು ಮುಸ್ಲಿಮರು ಪ್ರತ್ಯೇಕ ದೇಶಗಳೆಂಬ ಸಿದ್ಧಾಂತ ನಿಜವಾಗಿಯೂ ಒಂದು ದೊಡ್ಡ ಹೊಡೆತವಾಗಿತ್ತು. ಆದರೆ ಈ ಸಮನ್ವೀಕರಣದ ಪ್ರಕ್ರಿಯೆಯನ್ನು ಮುಂದುವರಿಸಲು ಕಾಂಗ್ರೆಸ್ ಸರಕಾರಕ್ಕೆ ಸಾಧ್ಯವಾಗಲಿಲ್ಲ. ತದ್ವಿರುದ್ಧವಾಗಿ, ಬಂಡವಾಳ ಶಾಹೀ ಮಾರ್ಗದಲ್ಲಿ ರಾಜ್ಯದ ಹಿಂದುಳಿಕೆ ಹಾಗೇ ಉಳಿಯಿತು, ತಮ್ಮ ಬಹುಕಾಲದ ಬಡತನ ಹಾಗೂ ಸಂಕಷ್ಟಗಳಿಂದ ಪರಿಹಾರ ಕಾಣದಾದ ಜನತೆಯನ್ನು ಒಂದು ಅಸಮಾನತಾ ಭಾವ ಆವರಿಸಿಕೊಳ್ಳಲಾರಂಭಿಸಿತು. ಪರಕೀಯ ಭಾವ ಇದರಿಂದಾಗಿ ಬೆಳೆದು ಹಳೆಯ ಅಡ್ಡಗೋಡೆಗಳು ಪುನರುಜ್ಜೀವನಗೊಂಡವು, ಜನರ ದೊಡ್ಡ ವಿಭಾಗ ಮತ್ತೆ ಧಾರ್ಮಿಕ ಭಾವೋದ್ರೇಕಗಳಿಗೆ ಬಲಿಯಾಗುವಂತಾಯಿತು. ಪ್ರತ್ಯೇಕತಾವಾದೀ ಮನೋಭಾವದ ಪ್ರಶ್ನೆ ಉದ್ಭವಗೊಂಡ ರೀತಿಯಿದು. ಪ್ರತಿಕ್ರಿಯಾವಾದಿಗಳು ಇದರ ದುರುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಶ್ರೀನಗರದಲ್ಲಿ ನಡೆದ ಕ್ರಿಕೆಟ್ ಪಂದ್ಯದಲ್ಲಿ ಇದು ಪ್ರದರ್ಶನಗೊಂಡಿತು. ಭಾರತದ ಐಕ್ಯತೆಯನ್ನು ವಿಘಟಿತಗೊಳಿಸುವ ಪ್ರತಿಕ್ರಿಯಾವಾದಿಗಳ ತಂತ್ರಗಳ ವಿರುದ್ಧ ಎಲ್ಲರೂ ಹೋರಾಡಬೇಕು ಎಂಬುದೇನೋ ನಿಜ. ಆದರೆ ಅದೇ ವೇಳೆ ಇಂತಹ ಪರಿಸ್ಥಿತಿಗೆ ತಂದಿಟ್ಟ ಕೇಂದ್ರ ಸರಕಾರದ ಪಾತ್ರವನ್ನೂ ಯಾರೂ ಮರೆಯಲಾರರು.

ರಾಷ್ಟ್ರೀಯ ಐಕ್ಯತೆ-ಎರಡು ಧೋರಣೆಗಳು

ಬೂರ್ಜ್ವಾ-ಭೂಮಾಲಕ ಆಳ್ವಿಕೆ ಹಾಗೂ ದೇಶೀಯ ಸಮಸ್ಯೆಗಳನ್ನು ಮಾನ್ಯ ಮಾಡಲು ನಿರಾಕರಣೆ ಇವೆರಡೂ ಸಾಮ್ರಾಜ್ಯಶಾಹಿಗಳಿಗೆ ಅಸ್ಸಾಂನಲ್ಲಿ ನಮ್ಮ ರಾಷ್ಟ್ರದ ಸಮಗ್ರತೆಯನ್ನು ಮುರಿಯುವ ಕುತಂತ್ರಗಳನ್ನು ಹೂಡಲು ಅವಕಾಶ ಮಾಡಿಕೊಟ್ಟವು. ಬೂರ್ಜ್ವಾ-ಭೂಮಾಲಕ ಸರಕಾರಕ್ಕೆ ಮತ್ತು ಆಳುವ ಪಕ್ಷಕ್ಕೆ ಈ ಸವಾಲನ್ನು ಎದುರಿಸಲು ಸಾಧ್ಯವಾಗಲಿಲ್ಲ. ಬಿಜೆಪಿ ಹಾಗೂ ಜನತಾ ಈ ಎರಡು ಬೂರ್ಜ್ವಾ ಪಕ್ಷಗಳೂ ಕೂಡಾ ಮುಂದಿನ ಅಲ್ಪ ಚುನಾವಣಾ ಲಾಭಕ್ಕಾಗಿ ದೇಶದ ಕೈಬಿಟ್ಟು ಪ್ರತ್ಯೇಕತಾವಾದಿ ವಿಚ್ಛಿದ್ರಕಾರಿಗಳನ್ನು ರಕ್ಷಿಸಿದವು. ಸಾಮ್ರಾಜ್ಯಶಾಹಿಗಳ ಸಂಚು, ದೇಶದ ಐಕ್ಯತೆಯನ್ನು ಅವರು ತಲೆಗೇ ಹಚ್ಚಿಕೊಳ್ಳಲಿಲ್ಲ.

ಆದರೆ ಸಿಪಿಐ (ಎಂ), ಸಿಐಟಿಯು, ಆದರ ಕಾರ್ಮಿಕ ಸಂಘಗಳು, ಕಾರ್ಮಿಕರು, ಜತೆಗೆ ಇತರ ಎಡ ಪಕ್ಷಗಳು ವಿಚ್ಛಿದ್ರಕಾರಿಗಳ ಸವಾಲನ್ನು ಎದುರಿಸಲು ಜನಸಾಮಾನ್ಯರ ಒಗ್ಗಟ್ಟನ್ನು ಕಾಯ್ದುಕೊಳ್ಳಲು ಹೋರಾಡಿದರು. ಇದಕ್ಕೆ ಪ್ರತಿಯಾಗಿ ಅವರು ಅಗಾಧ ಬೆಲೆ ತೆರಬೇಕಾಗಿ ಬಂತು; ಹಲ್ಲೆಗಳು, ಚಿತ್ರಹಿಂಸೆ, ಬಹಿಷ್ಕಾರ ಹಾಗೂ ಕೊಲೆಗಳನ್ನು ಎದುರಿಸಬೇಕಾಯಿತು. ಆದರೂ ಅವರು ಕಾರ್ಮಿಕ ವರ್ಗ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳು ದೇಶೀಯ ಗುಂಪುಗಳ ನ್ಯಾಯಬದ್ಧ ಬೇಡಿಕೆಗಳನ್ನು ಕಾಪಾಡುತ್ತಾ ದೇಶದ ಐಕ್ಯತೆಯನ್ನು ಕಾಪಾಡಲು ಏನೆಲ್ಲಾ ಮಾಡಬಲ್ಲವು ಎಂಬುದನ್ನು ತೋರಿಸಿ ಕೊಟ್ಟರು.

ಪಂಜಾಬ್--ಪ್ರಜಾಸತ್ತಾತ್ಮಕವಲ್ಲದ ನಿಲುವು

ಪಂಜಾಬ್‌ನಲ್ಲಿನ ಸ್ಥಿತಿಯೂ ಅಷ್ಟೇ ಗಂಭೀರವಾಗಿದೆ. ಅಲ್ಲಿಯೂ ಖಾಲಿಸ್ತಾನದ ಪ್ರತಿಪಾದಕರ ಕೈ ಮೇಲಾಗುತ್ತಿದೆ. ಈ ಜನರ ಗುರುಗಳು ಹಾಗೂ ಹಣದಾತರು ವಿದೇಶಿಗಳಿದ್ದಾರೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಖಾಲಿಸ್ತಾನಕ್ಕೆ ತಮ್ಮ ಬೆಂಬಲವನ್ನು ಅಡಗಿಸಿಟ್ಟಿಲ್ಲ.

ಖಾಲಿಸ್ತಾನದ ಸ್ವಯಂ-ಘೋಷಿತ ದುರಹಂಕಾರೀ ಅಧ್ಯಕ್ಷನಿಗೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಪ್ರತಿಕ್ರಿಯಾವಾದೀ ವಲಯಗಳು ಸುಸ್ವಾಗತ ಕೋರಿವೆ. ಭಾರತದಲ್ಲಿ ಅಮೇರಿಕನ್ ರಾಯಭಾರಿ ಖಾಲಿಸ್ತಾನ ಚಳುವಳಿಯನ್ನು ವಿಮೋಚನಾ ಹೋರಾಟದೊಂದಿಗೆ ಹೋಲಿಸಿದ್ದಾರೆ ಸಂಯುಕ್ತ ರಾಷ್ಟ್ರದಲ್ಲಿ ಅಮೇರಿಕನ್ ರಾಯಭಾರಿ ಭಾರತದ ಸಂಭವನೀಯ ಛಿದ್ರೀಕರಣದ ಪ್ರಸ್ತಾಪ ಮಾಡುತ್ತಾ ಸುತ್ತೋಲೆ ಹೊರಡಿಸಿದ್ದಾರೆ.

ಕೇಂದ್ರ-ರಾಜ್ಯ ಸಂಬಂಧಗಳ ಬಗ್ಗೆ ಮಾತನಾಡುವವರೆಲ್ಲ ಎಲ್ಲರೂ ಒಂದು ಪ್ರಜಾಸತ್ತಾತ್ಮಕ ನಿಲುವು ತಳೆದಿಲ್ಲ ಎಂಬುವದಕ್ಕೆ ಪಂಜಾಬ್ ಒಂದು ಉದಾಹರಣೆ. ಈ ವಿಷಯಕ್ಕೆ ಸಂಬಂಧಪಟ್ಟದ್ದು ಎನ್ನಲಾಗಿರುವ ಆನಂದ್‌ಪುರ್ ಸಾಹೀಬ್ ಠರಾವಿನಲ್ಲಿ ಹಲವು ಪ್ರಜಾಸತ್ತಾತ್ಮಕ ಬೇಡಿಕೆಗಳು, ಕಾರ್ಮಿಕವರ್ಗದ ಬೇಡಿಕೆಗಳೂ ಸಹಿತ, ಇವೆ. ಆದರೆ ಕೇಂದ್ರ-ರಾಜ್ಯಗಳ ಪ್ರಶ್ನೆಗೆ ಸಂಬಂಧಪಟ್ಟಂತೆ ಅದು ಒಂದು ಧರ್ಮವನ್ನು ದೇಶೀಯತೆಯೊಂದಿಗೆ ಗುರುತಿಸಿಕೊಂಡು ಒಂದು ಪ್ರತ್ಯೇಕತಾವಾದೀ ನಿಲುವು ತಳೆದಿದೆ. "ಪಂಥದ ರಾಜಕೀಯ ಗುರಿಗಳು ಖಂಡಿತವಾಗಿಯೂ ಹತ್ತನೇ ಗುರುವಿನ ಆದೇಶಗಳಲ್ಲಿ, ಸಿಖ್ ಇತಿಹಾಸದ ಪುಟಗಳಲ್ಲಿ ಹಾಗೂ ಖಾಲಸಾ ಪಂಥದ ಕಣ್ಣೋಟದಲ್ಲಿ ಸಮರಸಗೊಂಡಿವೆ. ಇದರ ಉದ್ದೇಶ ಖಾಲಸಾದ ಪ್ರಾಧಾನ್ಯತೆ" —ಎಂದಿದೆ ಆ ಠರಾವು.

> ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಬದಲಾವಣೆಗೆ ಬೆಂಬಲ ನೀಡುವವರಲ್ಲಿ ಎಲ್ಲರೂ ಕೂಡಾ ಈ ಬೇಡಿಕೆಯ ಹಿಂದೆ ಇರುವ ಪ್ರಜಾಸತ್ತಾತ್ಮಕ ಒತ್ತಾಸೆ ಹೊಂದಿಲ್ಲ...ಭಾರತೀಯ ಪ್ರಜಾಸತ್ತೆಯ ಈ ಮಹತ್ವಪೂರ್ಣ ಪ್ರಶ್ನೆಯನ್ನು ಸಂಕುಚಿತ ಪ್ರಾಂತೀಯ ಹಾಗೂ ಪ್ರಾದೇಶಿಕ ದಾವೆಗಳ ಮಟ್ಟಕ್ಕೆ ಇಳಿಸಲಾಗಿದೆ....ಇದು ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಬದಲಾವಣೆ ಬೇಕೆನ್ನುವವರನ್ನು ರಾಷ್ಟ್ರೀಯ ಐಕ್ಯತೆಯನ್ನು ಛಿದ್ರಗೊಳಿಸುವವರು ಎಂಬ ಆಪಾದನೆಗೆ ಗುರಿ ಮಾಡುತ್ತದೆ

ಕೋಮುವಾರು ದೃಷ್ಟಿಯ ಫಲ

ಮುಂದುವರಿದು ಖಾಲಸಾದ ಈ "ಜನ್ಮಸಿದ್ಧ ಹಕ್ಕನ್ನು ಆಚರಣೆಗೆ ತರಲು ಅಗತ್ಯ ಪರಿಸರದ ಸೃಷ್ಟಿ ಹಾಗೂ ಒಂದು ರಾಜಕೀಯ ಸಂವಿಧಾನದ ಸಾಧನೆ ಅವಶ್ಯಕ ಹೆಜ್ಜೆಗಳು" ಎಂದಿದೆ ಅದು. ದೇಶೀಯತೆಯನ್ನು ಮತ್ತು ಪ್ರಭುತ್ವವನ್ನು ಧರ್ಮದೊಂದಿಗೆ ಗುರುತಿಸಿ, ಧರ್ಮದ ಹೆಸರಿನಲ್ಲಿ ಒಂದು ಪ್ರತ್ಯೇಕ ಸ್ವಾಧೀನ ಪ್ರಭುತ್ವದ ಬೇಡಿಕೆಯಿಟ್ಟು ದೇಶವನ್ನು ವಿಭಜಿಸುವ ದಿವಂಗತ ಜಿನ್ನಾರ ವಾದದ ಪುನರುಜ್ಜೀವನವೇ ಹೊರತು ಬೇರೇನೂ ಅಲ್ಲ. ಯಾವುದೇ ನಿಜವಾದ ರಾಜಕೀಯ ಪಕ್ಷ ಕೇಂದ್ರ-ರಾಜ್ಯಗಳ ಪುನರ್ರಚನೆಯ ಹೆಸರಿನಲ್ಲಿ ಪ್ರತಿಪಾದಿಸುವ ಈ ಏಕ್‌ದಂ ಪ್ರತಿಕ್ರಿಯಾವಾದೀ ಬೇಡಿಕೆಗೆ ಬೆಂಬಲ ನೀಡಲು ಸಾಧ್ಯವಿಲ್ಲ. ಸ್ವಸ್ಥ ಬುದ್ಧಿಯ ಅಕಾಲೀ ನಾಯಕರು ವಿರೋಧೀ ಪಕ್ಷಗಳೊಂದಿಗೆ ತಮ್ಮ ಮಾತುಕತೆಗಳಲ್ಲಿ ಈ ಠರಾವಿನ ಬಗ್ಗೆ ಪ್ರಸ್ತಾಪವನ್ನು ಬಿಟ್ಟುಬಿಟ್ಟದ್ದು ಒಳ್ಳೆಯದಾಯಿತು.

ಆದರೂ ಈ ರೀತಿ ಒಂದೇ ಕೋಮನ್ನು ಉದ್ದೇಶಿಸಿದ್ದು, ಪ್ರಭುತ್ವವನ್ನು ಸಿಖ್ಖ ಮತದೊಂದಿಗೆ ಈ ರೀತಿ ಗುರುತಿಸಿರುವುದು ರಾಷ್ಟ್ರಕ್ಕೆ ಮತ್ತು ಪಂಜಾಬಿನ ಜನತೆಗೆ ಅಪಾರ ನಷ್ಟ ಉಂಟು ಮಾಡಿದೆ. ಇದನ್ನು ಸರಿಪಡಿಸುವುದು ಅಸಾಧ್ಯ. ಕೊಲೆ, ಹತ್ಯೆ, ಇತ್ಯಾದಿಗಳು ಕೋಮುವಾರು ದೃಷ್ಟಿಯಿಂದ ನಡೆದಿದ್ದು ಧಾರ್ಮಿಕ ಭಾವನೆಯ ಮೊರೆಯನ್ನು ಆಧರಿಸಿದ ಒಂದು ಚಳುವಳಿಯ ನೇರ ಫಲ. ಜನತೆಯ ಕೋಮು ಭಾವನೆ ಕೆದಕುವುದರಲ್ಲಿ ತಾವು ನೀತಿಗೆಟ್ಟ ವ್ಯಕ್ತಿಗಳೊಂದಿಗೆ ಸ್ಪರ್ಧಿಸುವುದು ಸಾಧ್ಯವಿಲ್ಲ ಎಂಬುದನ್ನು ಅಕಾಲೀ ನಾಯಕರು ಈಗ ಅರಿತಿದ್ದಾರೆ.

ಕಾಂಗ್ರೆಸ್ಸಿಗರ ಸ್ವಾರ್ಥಪೂರ್ಣ ಲೆಕ್ಕಾಚಾರ

ಪರಿಸ್ಥಿತಿಯನ್ನು ಉಲ್ಬಣಗೊಳಿಸುವುದರಲ್ಲಿ ಭಾರತ ಸರಕಾರ ತನ್ನ ಪಾತ್ರವನ್ನು ವಹಿಸುತ್ತಿದೆ. ಚಂಡೀಘಡ, ನೀರಿನ ಮೂಲಗಳ ಸರಿಯಾದ ವಿತರಣೆ ಹಾಗೂ ಭಾಷಾ ಆಧಾರದ ಮೇಲೆ ಪ್ರದೇಶಗಳ ಮರು ವಿತರಣೆ ಇತ್ಯಾದಿ ಸಮಸ್ಯೆ ಪಂಜಾಬೀ ಜನತೆಯ ಹಿತಾಸಕ್ತಿಗಳಿಗನುಗುಣವಾದ ಬೇಡಿಕೆಗಳಿಗೆ ಒಪ್ಪುವಲ್ಲಿ ಸರಕಾರಕ್ಕೆ ಏನೂ ತೊಂದರೆಯಾಗಬಾರದಿತ್ತು. ಆದರೆ ಅವರ ಬದಲು ಸರಕಾರ ಕೆಲವು ಧಾರ್ಮಿಕ ಬೇಡಿಕೆಗಳನ್ನು ಒಪ್ಪಿಕೊಂಡು ಸಿಖ್ಖ ಮತಾಂಧತೆಗೆ ಬೆಣ್ಣೆ ಹಚ್ಚಲು ಪ್ರಯತ್ನಿಸುತ್ತದೆ. ಈ ಚೌಕಾಸಿ ವ್ಯವಹಾರ ರಾಜ್ಯದ ಹಿಂದೂ ಮತ್ತು ಸಿಖ್ಖರನ್ನು ಪರಸ್ಪರ ದೂರ ಮಾಡಿ ಕೋಮುವಾದೀ ಧ್ರುವೀಕರಣ ನಡೆಸಲು ರಾಷ್ಟ್ರ-ವಿರೋಧೀ ತತ್ತ್ವಗಳಿಗೆ ಅವಕಾಶ ಮಾಡಿಕೊಡುತ್ತದೆ. ಬಹುಶಃ ಇಂತಹ ಒಂದು ಪರಿಸ್ಥಿತಿಯಿಂದಾಗಿ ಹಿಂದೂಗಳು ಮುಂದಿನ ಚುನಾವಣೆಯಲ್ಲಿ ತಮಗೆ ಅನಿವಾರ್ಯವಾಗಿ ಓಟು ಹಾಕಬೇಕಾಗಿ ಬರುತ್ತದೆ ಎಂದು ಆಳುವ ಪಕ್ಷದ ಮುಖಂಡರು ಲೆಕ್ಕ ಹಾಕಿದ್ದಾರೆ. ರಾಷ್ಟ್ರಕ್ಕೆ ಏನೇ ಆಗಲಿ, ಅದು ಯಾರಿಗೂ ಬೇಕಿಲ್ಲವಾಗಿದೆ.

ಇಲ್ಲಿ ಕೂಡಾ ಆಳುವ ಪಕ್ಷ ಹಾಗೂ ಉಳಿದ ಬೂರ್ಜ್ವಾ ಪಕ್ಷಗಳು ವಿಫಲವಾಗಿರುವಾಗ, ಅಕಾಲೀದಳ ಹಿಂದೂ-ಸಿಖ್ ಐಕ್ಯತೆಗೆ ಮಾಡಿರುವ ಭಾರೀ ಅನಾಹುತವನ್ನು ಮೂಕ ಪ್ರೇಕ್ಷಕನಾಗಿ ನೋಡುತ್ತಿರುವಾಗ ಸಿ ಪಿ ಐ (ಎಂ) ಹಾಗೂ ಸಿ ಪಿ ಐ ಪಂಜಾಬಿನ ಜನತೆಯ ಹಿತಾಸಕ್ತಿಗನುಗುಣವಾಗಿರುವ ನ್ಯಾಯಬದ್ಧ ಬೇಡಿಕೆಗಳನ್ನು ಬೆಂಬಲಿಸುತ್ತಾ, ಜನತೆಯ ಐಕ್ಯತೆಯನ್ನು ಮೇಲೆತ್ತಿ ಹಿಡಿದಿವೆ.

ಸಮಸ್ಯೆಯ ಕೇಂದ್ರ ಅಂಶ

ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಬದಲಾವಣೆಗೆ ಬೆಂಬಲ ನೀಡುವವರಲ್ಲಿ ಎಲ್ಲರೂ ಕೂಡಾ ಈ ಬೇಡಿಕೆಯ ಹಿಂದೆ ಇರುವ ಪ್ರಜಾಸತ್ತಾತ್ಮಕ ಒತ್ತಾಸೆ ಹೊಂದಿಲ್ಲ ಎಂದು ನಾವಿಗಾಗಲೇ ಹೇಳಿದ್ದೇವೆ. ಭಾರತೀಯ ಪ್ರಜಾಸತ್ತೆಯ ಈ ಮಹತ್ತ್ವಪೂರ್ಣ ಪ್ರಶ್ನೆಯನ್ನು ಸಂಕುಚಿತ ಪ್ರಾಂತೀಯ ಹಾಗೂ ಪ್ರಾದೇಶಿಕ ದಾವೆಗಳ ಮಟ್ಟಕ್ಕೆ ಇಳಿಸಲಾಗಿದೆ. ಹಾಗೂ ಸಂಕುಚಿತವಾದೀ ಭಾವನೆಗಳನ್ನು, ಉದ್ರೇಕಿಸಲು ಯತ್ನಿಸಲಾಗುತ್ತಿದೆ. ಈ ಪ್ರಶ್ನೆಯನ್ನು, ಉದಾಹರಣೆಗಾಗಿ ಹೇಳುವುದಾದರೆ, ಪೂರ್ವ ಮತ್ತು ಪಶ್ಚಿಮ ಪ್ರದೇಶಗಳ ನಡುವಿನ ಪ್ರಶ್ನೆಯೆಂದು ಪ್ರಸ್ತುತ ಪಡಿಸುವುದು, ಬೇರೆ ರಾಜ್ಯಗಳಿಗೆ, ಜನಗಳಿಗೆ ಕೊಡದೆ ತಮಗಷ್ಟೇ ಪ್ರತ್ಯೇಕ ರಿಯಾಯ್ತಿ ಬೇಕೆಂದು ಒತ್ತಾಯಿಸುವುದು ಇವೆಲ್ಲಾ ಈ ಪ್ರಶ್ನೆಯ ಪ್ರಜಾಪ್ರಭುತ್ವವಾದಿ ತತ್ತ್ವವನ್ನು ಕೀಳು ಮಟ್ಟಕ್ಕೆ ಇಳಿಸುವಂತಹ ಅಂಶಗಳು. ಇದು ಈ ಸಂಬಂಧಗಳಲ್ಲಿ ಬದಲಾವಣೆ ಬೇಕೆನ್ನುವವರನ್ನು ರಾಷ್ಟ್ರೀಯ ಐಕ್ಯತೆಯನ್ನು ಛಿದ್ರಗೊಳಿಸುವವರು ಎಂಬ ಆಪಾದನೆಗೆ ಗುರಿಮಾಡುತ್ತದೆ.

ಈಗಿನ ಕೇಂದ್ರ-ರಾಜ್ಯ ಸಂಬಂಧಗಳ ಆಧಾರ ಯಾವುದೇ ಒಂದು ಕಾರ್ಯಕ್ಕೆ ಹೆಚ್ಚಿನ ಪ್ರಜಾಸತ್ತಾತ್ಮಕ ಅಥವಾ ಆರ್ಥಿಕ ಸ್ವಾತಂತ್ರ್ಯ ಎಂಬುದೇನಲ್ಲ, ಬದಲಿಗೆ ಅದು ಎಲ್ಲಾ ರಾಜ್ಯಗಳ ಸ್ವಾತಂತ್ರ್ಯದ ದಮನವನ್ನು ಆಧರಿಸಿ ನಿಂತಿದೆ. ಈ ಹೋರಾಟದ ಕೇಂದ್ರ ಅಂಶ ಕೇಂದ್ರಕ್ಕೆ ರಾಜ್ಯಗಳ ಅಧೀನತೆಯೇ ಹೊರತು ಯಾವುದೋ ಒಂದು ರಾಜ್ಯಕ್ಕೆ ವಿಶೇಷ ಒಲವು ತೋರಿಸಲಾಗಿದೆ ಎಂದೇನಲ್ಲ.

ಸಂಕುಚಿತವಾದ-ಮೊದಲ ವೈರಿ

ಈ ಆಂದೋಲನವನ್ನು ಹೀಗೆ ಕೀಳು ಮಟ್ಟಕ್ಕೆ ಇಳಿಸುವುದು ರಾಜ್ಯಗಳ ಪಟ್ಟಭದ್ರ ಹಿತಾಸಕ್ತಿಗಳಿಗೆ, ವಿಶೇಷವಾಗಿ ಭೂಮಾಲಕರಿಗೆ ಬಹಳ ಅನುಕೂಲಕರ. ಯಾಕೆಂದರೆ ಸಂಕುಚಿತವಾದದ ಮೊರೆ ಹೋದರೆ ವರ್ಗ ಮತ್ತು ಪ್ರಜಾಪ್ರಭುತ್ವವಾದೀ ಬೇಡಿಕೆಗಳನ್ನು ಬದಿಗೊತ್ತಿ ಅಧಿಕಾರವನ್ನು ಪ್ರವೇಶಿಸಿ ರಾಜ್ಯ ಬಜೆಟ್‌ಗಳನ್ನು ಲೂಟಿ ಹೊಡೆಯಲು ಸಾಧ್ಯ ಎಂಬುದು ಅವರ ಆಸೆ. ಈ ಜನ ಆಂಧ್ರ ಪ್ರದೇಶದಲ್ಲಿ ಪ್ರತ್ಯೇಕ ತೆಲಂಗಾಣಾದ ಕೂಗು ಹಾಕಿ ಮಾಡಿದ ಅನಾಹುತ ಎಲ್ಲರಿಗೂ ತಿಳಿದಿದೆ. ಕೇಂದ್ರ-ರಾಜ್ಯ ಸಂಬಂಧ

(7ನೇ ಪುಟ ನೋಡಿ)

ಕರ್ನಾಟಕದ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಕುರಿತು

(3ನೇ ಪುಟದಿಂದ)

ಸರಕಾರ ಅದು ಇನ್ನು ಬೀಳಲು ಕೆಲವೇ ದಿನ ಬಾಕಿ ಎಂದು ಸಾರಿದರು. ಎಲ್ಲರೂ ಸೇರಿ ಬಂಗಾರಪ್ಪನವರನ್ನು "ಹೆಗ್ಡೆ ಸರಕಾರವನ್ನು ಕಿತ್ತು ಹಾಕುವ ಹಂಚಿಕೆ ಮಾಡಲು" ದಿಲ್ಲಿಗೆ ಕಳುಹಿಸಿದರು. ಮೊದಲೇ ಅತೃಪ್ತಿಯನ್ನು ಸೂಚಿಸುತ್ತಿದ್ದ ರಾಜ್ಯಪಾಲ ಬ್ಯಾನರ್ಜಿಯವರನ್ನು ತಮ್ಮ ಪಿತೂರಿಯಲ್ಲಿ ಸೇರಿಸಿಕೊಳ್ಳಲು ರಹಸ್ಯ ಮಾತುಕತೆಗಳು ನಡೆದುವು, ದಟ್ಟ ವದಂತಿಗಳು ಹರಡಿದುವು.

ರಾಮಕೃಷ್ಣ ಹೆಗ್ಗಡೆಯವರು ಜನತಾದ ಕಡಿವಾಣವನ್ನು ಗಟ್ಟಿಯಾಗಿ ಹಿಡಿದು ಎಲ್ಲ ಪ್ರಯತ್ನಕ್ಕೆ ಸವಾಲು ಎಂಬಂತೆ ನೀವು ಕಾಂಗ್ರೆಸು (ಐ) ನವರು ನಮ್ಮಲ್ಲಿಂದ 12 ಮಂದಿಯನ್ನು ಒಯ್ದರೆ, ನಿಮ್ಮಲ್ಲಿಂದ 18 ಮಂದಿಯನ್ನು ಸೆಳೆಯುತ್ತೇವೆ ಎಂದು ಸಾರಿ ಒಂದೆಡೆ ತಮ್ಮ ಸರಕಾರವನ್ನು ಹೇಗಾದರೂ ಮಾಡಿ ಉಳಿಸಲು ತಮ್ಮ ದಕ್ಷತೆಯನ್ನು ವ್ಯಕ್ತಪಡಿಸಿದರು. ಇನ್ನೊಂದೆಡೆ ಜನತೆಯಲ್ಲಿ ಎಂ.ಎಲ್.ಎ ಗಳ ಪಕ್ಷಾಂತರದ ಬಗ್ಗೆ ಇವರ ನಿಲುವೆಯನ್ನು ಈ ರೀತಿ ಬಹಿರಂಗ ಪ್ರದರ್ಶಿಸಿದರು. ಇದೇ ವೇಳೆಯಲ್ಲಿ ಕಾಂಗ್ರೆಸ್ (ಐ) ಎಂ. ಪಿ. ಗಳು ದಿಲ್ಲಿಯಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಕೊಟ್ಟು "ಕರ್ನಾಟಕದಲ್ಲಿ ಈಗ ಎಲ್ಲ ಮಂತ್ರಿಗಳು ರಾಜೀನಾಮೆ ಕೊಟ್ಟಿರುವುದರಿಂದ ಅಲ್ಲಿ ಸರಕಾರವೇ ಇಲ್ಲ, ಆದ್ದರಿಂದ ರಾಷ್ಟ್ರಪತಿ ಆಡಳಿತವನ್ನು ಹೇರಬೇಕು ಎಂದು ಒತ್ತಾಯಿಸಿದರು.

ಗಲಿಬಿಲಿ ಸಂಶಯ ಮುಂದೇನು ಎಂಬ ವಾತಾವರಣ ಕರ್ನಾಟಕದಲ್ಲಿ ಮೂಡಿದ್ದ ಸಂದರ್ಭದಲ್ಲಿ ಆಂಧ್ರದಲ್ಲಿ ಎನ್.ಟಿ.ಆರ್. ರವರ ಮಂತ್ರಿಮಂಡಲವನ್ನು ವಜಾಮಾಡಿ ಅಲ್ಪಸಂಖ್ಯಾತ ಭಾಸ್ಕರರಾವ್ ರವರ ಮಂತ್ರಿಮಂಡಲವನ್ನು ರಚಿಸಲು ಆಹ್ವಾನಿಸಲಾದ ಘಟನೆಯು ಇಡೀ ದೇಶದಲ್ಲಿ ಕೇಂದ್ರದ ಕಾಂಗ್ರೆಸ್ಸಿನ ಸರ್ವಾಧಿಕಾರಿ ನೀತಿಯ ವಿರುದ್ಧ ಜನತೆ ಸಿಡಿದೆದ್ದಿತು. 19 ವಿರೋಧ ಪಕ್ಷಗಳು ಒಂದಾಗಿ ಈ ಪ್ರಜಾಪ್ರಭುತ್ವದ ಕೊಲೆಯನ್ನು ತೀವ್ರವಾಗಿ ಪ್ರತಿಭಟಿಸಲು ಒಂದಾಗಿ ಕಾರ್ಯಕ್ರಮ ಹಾಕಿತು.

ಆಂಧ್ರ ಪ್ರದೇಶದ ಸರಕಾರದ ವಜಾ ಸುದ್ದಿ ತಿಳಿದಕೂಡಲೇ ಪಕ್ಷದ ಬೆಂಗಳೂರು ಘಟಕ ಮೊದಲ ಹೆಜ್ಜೆ ಇಟ್ಟು ಜನತಾ ಪಕ್ಷ, ಸಿಪಿಐ ಮತ್ತು ಭಾಜಪ ದೊಂದಿಗೆ ಪ್ರತಿಭಟನಾ ಸಭೆಯನ್ನು ನಡೆಸಲು ಕ್ರಮ ಕೈಗೊಂಡಿತು. ಬೆಂಗಳೂರಿನಲ್ಲಿ ಪಕ್ಷ ಮತ್ತು ಸಿಐಟಿಯು ವಿನ ಒತ್ತಾಯದಿಂದ ಕೇಂದ್ರ ಕಾರ್ಮಿಕ ಸಂಘಟನೆಗಳು ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಟ್ಟಿದ್ದು ಕೂಡ ಗಮನಾರ್ಹ. ಅದೇ ರೀತಿಯಲ್ಲಿ ಪಕ್ಷದ ಅನೇಕ ಜಿಲ್ಲಾ ತಾಲ್ಲೂಕು ಘಟಕಗಳು ಮೊದಲು ಹೆಜ್ಜೆ ಹಾಕಿ ಜನರ ಪ್ರತಿಭಟನೆಗೆ ರೂಪುಕೊಡಲು ಶ್ರಮಿಸಿದುವು. ಉಳಿದ ಪಕ್ಷಗಳನ್ನು ತಮ್ಮ ಜೊತೆಯಲ್ಲಿ ಸೇರಿಸಿಕೊಂಡು ಐಕ್ಯ ಕಾರ್ಯಕ್ರಮ ಹಾಕಿದುವು

ಈ ಸಂದರ್ಭದಲ್ಲಿ ಸಿ.ಪಿ.ಐ. ಬೆಂಗಳೂರಿನಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಭಾ.ಜ.ಪ. ದ ಜೊತೆಗೂಡಿ ಭಾಗವಹಿಸುವುದಕ್ಕೆ ಹಿಂಜರಿಯಿತು ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸುವುದಕ್ಕೆ ಎ.ಐ.ಟಿ.ಯು.ಸಿ ಯ ನಾಯಕತ್ವ ಹಿಂದೆ ಮುಂದೆ ಯೋಚಿಸಿದ್ದು, ಅವರ ನ್ಯಾಷನಲ್ ಕೌನ್ಸಿಲ್ ನಿಂದ ಸೂಚನೆ ಬಂದ ಮೇಲೆಯೆ ಮುಷ್ಕರದಲ್ಲಿ ಭಾಗವಹಿಸಿದ್ದು. ಇದರಿಂದ ಮುಷ್ಕರದ ಸಿದ್ಧತೆಯಲ್ಲಿ ಗಲಿಬಿಲಿಯುಂಟಾಗಲು ಕಾರಣವಾಯಿತು ಎಂಬುದನ್ನು ಗಮನಿಸಲೇ ಬೇಕು.

ಆಂಧ್ರ ಪ್ರದೇಶದ ನೆರೆಹೊರೆಯ ರಾಜ್ಯವಾದ ಕರ್ನಾಟಕದಾದ್ಯಂತ ಜನತೆ ಸಿಡಿದೆದ್ದು ಕೇಂದ್ರ ಸರ್ಕಾರದ ಈ ವರ್ತನೆಯನ್ನು ಖಂಡಿಸಿತು. ದೇಶದಾದ್ಯಂತ ತಾ॥ 25-8-1984 ರಂದು ನಡೆದ "ಪ್ರತಿಭಟನಾ ದಿನಾಚರಣೆ" ಕರ್ನಾಟಕದಲ್ಲಿ ಒಂದಾಗಿ ಆಚರಿಸಲ್ಪಟ್ಟಿತು. ಜನತೆಯ ಪ್ರತಿಭಟನೆಯು ಒಂದು ಹೊಸ ರಾಜಕೀಯ ಅಲೆಯನ್ನು ರಾಜ್ಯಾದ್ಯಂತ ಉಂಟು ಮಾಡಿತು.

ರಾಮಕೃಷ್ಣ ಹೆಗ್ಗಡೆಯವರ ಸರಕಾರವು ಪ್ರತ್ಯಕ್ಷವಾಗಿ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವ, ಪ್ರಜಾತಂತ್ರಕ್ಕೆ ಮಾರಕವಾದ ಕೇಂದ್ರ ಸರಕಾರದ ಕಾಂಗ್ರೆಸ್ (ಐ) ನೀತಿಯನ್ನು ಖಂಡಿಸುವ ಹೋರಾಟದಲ್ಲಿ ಪಾಲುಗೊಂಡಿತು. ಎನ್. ಟಿ. ಆರ್. ಗೆ ಬೆಂಬಲ ನೀಡಿದ 162 ಎಂ.ಎಲ್.ಎ ಗಳಿಗೆ ಭಾಸ್ಕರರಾವ್ ಮತ್ತು ಕಾಂಗ್ರೆಸ್ (ಐ) ಯವರ ನಿಕೃಷ್ಟ ರೀತಿಯ ಒತ್ತಡಗಳಿಂದ ರಕ್ಷಣೆ ನೀಡಿತು. ಈ ಎಲ್ಲಾ ಘಟನೆಗಳು ರಾಜ್ಯದಲ್ಲಿ ರಾಮಕೃಷ್ಣ ಹೆಗ್ಗಡೆ ಸರಕಾರವನ್ನುರುಳಿಸುವ ಕಾಂಗ್ರೆಸ್ (ಐ) ಪಕ್ಷದ ಹಂಚಿಕೆಗೆ ತಣ್ಣೀರೆರಚಿದಂತಾಯಿತು. ಆದರೆ ಕುತಂತ್ರಗಳನ್ನು ಅವರು ಇನ್ನೂ ಕೈಬಿಟ್ಟಿಲ್ಲ.

ಇದೇ ವೇಳೆಯಲ್ಲಿ ಆಂಧ್ರ ಪ್ರದೇಶದ ಘಟನೆಯ ಹಿನ್ನೆಲೆಯಲ್ಲಿ ರಾಮಕೃಷ್ಣ ಹೆಗ್ಗಡೆಯವರು ತಮ್ಮ ಮಂತ್ರಿಮಂಡಲವನ್ನು 38 ಮಂತ್ರಿಗಳ ಮಂತ್ರಿಮಂಡಲವಾಗಿ ವಿಸ್ತರಿಸಿದರು. ದೇವೇಗೌಡ, ಜೆ.ಎಚ್. ಪಟೇಲ್ ಮತ್ತು ಮದ್ನಾಳ್ ರಂತಹ ಹಿರಿಯ ಪಕ್ಷದ ಮುಂದಾಳುಗಳನ್ನು ಪಕ್ಷದ ಕೆಲಸಕ್ಕೆಂದು ಸಂಪುಟದಿಂದ ಹೊರಗಿಡಲಾಯಿತು. ದೇವೇಗೌಡರು ಜನತಾ ಪಕ್ಷದ ಅಧ್ಯಕ್ಷರು, ಮುದ್ನಾಳ್‌ರವರು ಉಪಾಧ್ಯಕ್ಷರು, ಜೆ.ಎಚ್. ಪಟೇಲ್ ರವರು ಮಹಾಪ್ರಧಾನ ಕಾರ್ಯದರ್ಶಿಗಳಾದರು.

ಈ ಆಯ್ಕೆಗಳ ಸಂಬಂಧದಲ್ಲಿ ಜನತಾ ಪಕ್ಷದಲ್ಲಿ ಬಹಳ ವಾದವಿವಾದಗಳು ನಡೆದಿವೆ. ಇದರಲ್ಲಿ ವಿಧಾನ ಸಭಾ ಸ್ಪೀಕರ್‌ರವರಾದ ಶ್ರೀ ಚಂದ್ರೇಗೌಡರ ಚಂಚಲತೆಯನ್ನೇ ಡೋಲಾಯಮಾನ ನೀತಿಯನ್ನು ಅನುಸರಿಸುತ್ತಿದ್ದಾರೆಂದು, ಕಾಂಗ್ರೆಸ್ ಪಕ್ಷದವರು ಅವರನ್ನು ಮುಖ್ಯಮಂತ್ರಿ ಮಾಡುವ ಆಮಿಷ ತೋರಿಸುತ್ತಿದ್ದಾರೆಂದು ವರದಿಯಾಗಿದೆ.

ಈ ನಡುವೆ ರಾಮಕೃಷ್ಣ ಹೆಗ್ಗಡೆಯವರು ವಿರೋಧ ಪಕ್ಷಗಳನ್ನು ಅದರಲ್ಲಿಯೂ ಎರಡು ಕಮ್ಯುನಿಸ್ಟ್ ಪಕ್ಷಗಳನ್ನು ಕರೆದು ಚರ್ಚಿಸಲು ಕೂಡ ಆರಂಭಿಸಿದರು. ಒಟ್ಟಾಗಿ ಚುನಾವಣೆಯನ್ನು ಎದುರಿಸಬೇಕೆಂದೂ, ಅದಕ್ಕೆ ಮೊದಲು ಜನತೆಯ ಮಧ್ಯೆ ಛಿದ್ರಕಾರಿ ಶಕ್ತಿಗಳ ವಿರುದ್ಧ ಮತ್ತು ಕಾಂಗ್ರೆಸ್ (ಐ) ಸರ್ವಾಧಿಕಾರಿ ಧೋರಣೆಯ ವಿರುದ್ಧ ಜನತೆಯನ್ನು ಜಾಗೃತಿಗೊಳಿಸುವ ರಾಜಕೀಯ ಪ್ರಚಾರ ಕಾರ್ಯವನ್ನು ಜಂಟಿಯಾಗಿ ಮಾಡುವ ಅಭಿಮತಕ್ಕೆ ಸಮ್ಮತಿ ನೀಡಿದರು. ಆದರೆ ಸಿ.ಪಿ.ಐ. ಮತ್ತು ಜನತಾ ಪಕ್ಷಗಳು ಸರಿಯಾದ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ.

ಸೆಪ್ಟೆಂಬರ್ 4 ರಂದು ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಫೆಡರೇಷನ್ ಕರೆ ಮೇರೆಗೆ ಕರ್ನಾಟಕದಲ್ಲಿ ಮುಷ್ಕರವು ಭಾಗಶಃ ಯಶಸ್ಸನ್ನು ಪಡೆಯಿತು ಕರ್ನಾಟಕ ಸರ್ಕಾರ ಈ ಮುಷ್ಕರವನ್ನು ಬೆಂಬಲಿಸುವ ಧೋರಣೆಯನ್ನು ತಳೆಯುವ ಬದಲು ತೀವ್ರ ವಿರೋಧ ಧೋರಣೆಯನ್ನು ಅನುಸರಿಸಿತು ಮುಷ್ಕರ ಪ್ರತಿಬಂಧಕ ಕಾಯ್ದೆಯನ್ನು ಜಾರಿಮಾಡಿ, 132 ಮಂದಿಯನ್ನು ಬಂಧಿಸಿ ಕೇಸುಗಳನ್ನು ದಾಖಲೆ ಮಾಡಿತು. ಅಲ್ಲದೆ ಮುಷ್ಕರಕ್ಕೆ ಮೊದಲು ಮತ್ತು ಅನಂತರ ಮುಷ್ಕರದ ಕಾರಣಕ್ಕಾಗಿ ಸರ್ಕಾರಿ ನೌಕರರ ಸಂಘದ ಮೇಲೆ ಜನತಾ ಪಕ್ಷದ ಕಾರ್ಯದರ್ಶಿಗಳು ಮತ್ತು ಮಂತ್ರಿಗಳು ಪತ್ರಿಕಾ ಹೇಳಿಕೆಗಳ ಮೂಲಕ ಧಾಳಿ ನಡೆಸಿದರು. ಇದು ತೀವ್ರ ಖಂಡನೀಯ ವರ್ತನೆ.

ಚುನಾವಣೆಯ ಲಕ್ಷ್ಯವಿಟ್ಟು, ಇತ್ತೀಚೆಗೆ ರಾಜ್ಯದಲ್ಲಿ ಎನ್.ಟಿ.ಆರ್. ಸರಕಾರದ ವಜಾ ಪ್ರತಿಭಟನೆ ಸಂದರ್ಭದಲ್ಲಿ ಉಕ್ಕಿದ ಕಾಂಗ್ರೆಸ್ ವಿರೋಧಿ ಭಾವನೆಯನ್ನು ತಾಮಸಗೊಳಿಸಿ ಮಹಿಳಾ ಸಮ್ಮೇಳನದ ನೆಪದಲ್ಲಿ ಸ್ವತಃ ಇಂದಿರಾಗಾಂಧಿ, ಇಂಟಕ್ ಸಮ್ಮೇಳನದ ಉದ್ಘಾಟನೆಗಾಗಿ ರಾಜೀವ್ ಗಾಂಧಿ ರಾಜ್ಯದಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಇತರ ಪಕ್ಷಗಳೂ ಚುನಾವಣೆಗಳ ಸಿದ್ಧತೆಗಳಲ್ಲಿ ತೊಡಗಿವೆ. ಈ ಮಧ್ಯೆ ಹಿಂದೆ "ಹೆಗ್ಡೆ ಸರಕಾರ ಚಲೋಜಾವ್" ಎಂಬ ಘೋಷಣೆಯ ಮೇಲೆ ಹೋರಾಟ ನಡೆಸಿದೆ. ರಾಜ್ಯ ರೈತ ಸಂಘವು ಕೂಡ ಚುನಾವಣೆಗಳಲ್ಲಿ "ಪಕ್ಷರಹಿತ" ವಾದ ತನ್ನ ಪ್ರತಿನಿಧಿಗಳನ್ನು ನಿಲ್ಲಿಸಲು ಪ್ರಯತ್ನ ಮಾಡುತ್ತಿದೆ.

ಈ ಮಧ್ಯೆ 131 ತಾಲ್ಲೂಕುಗಳಲ್ಲಿ ಬರಗಾಲ ಪರಿಸ್ಥಿತಿ ಉಂಟಾಗಿದೆ. ಕೆರೆಗಳಲ್ಲಿ ನೀರು ಇನ್ನೂ ತುಂಬಿಲ್ಲ. ಲಕ್ಷಾಂತರ ಜನರು ಈ ಪರಿಸ್ಥಿತಿಯಿಂದ ಕಳವಳಗೊಂಡಿದ್ದಾರೆ. ಈ ದಿಸೆಯಲ್ಲಿ ಪ್ರಾಂತ ರೈತ ಸಂಘವು ಕಾರ್ಯಕ್ರಮ ರೂಪಿಸಿ ಕಾರ್ಯ ಪ್ರವೃತ್ತರಾಗಬೇಕು.

ಒಟ್ಟಿನಲ್ಲಿ ಕರ್ನಾಟಕದ ಪರಿಸ್ಥಿತಿಯು ವಿರೋಧ ಪಕ್ಷಗಳಿಗೆ ಅನುಕೂಲವಾಗಿದೆ. ಈಗಿನ ವಾತಾವರಣದಲ್ಲಿ ನಮ್ಮ ಪಕ್ಷವು ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಈ ರಾಜಕೀಯ ಪ್ರಚಾರವನ್ನು ಜಂಟಿಯಾಗಿ ಕೈಗೊಳ್ಳಬೇಕು, ಚುನಾವಣೆಯನ್ನು ಎದುರಿಸಲು ಸರ್ವರೀತಿಯ ತಯಾರಿ ನಡೆಸಬೇಕು.

★

ಮಂಗಳೂರು

ಇ. ಎಸ್. ಐ. ಅವ್ಯವಸ್ಥೆ-ಕಾರ್ಮಿಕರ ಖಂಡನೆ

4-9-84 ರಂದು ಉಪಾಧ್ಯಕ್ಷ ಕಾ. ಮೂಸಬ್ಬನವರ ಅಧ್ಯಕ್ಷತೆಯಲ್ಲಿ ಸೇರಿದ ದ. ಕ ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯು ಮಂಗಳೂರಿನಲ್ಲಿ ಇ. ಎಸ್. ಐ. ವೈದ್ಯಕೀಯ ವ್ಯವಸ್ಥೆಯಲ್ಲಿನ ಅವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸಿ, ಈ ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿತು.

ನೌಕರರ ರಾಜ್ಯ ವಿಮಾ ಯೋಜನೆ (ಇ. ಎಸ್. ಐ.) ಯನ್ನು ಜಾರಿಗೊಳಿಸುವಲ್ಲಿ, ಅದರ ವೈದ್ಯಕೀಯ ವಿಭಾಗದ ಅಧಿಕಾರಸ್ಥರು ಮತ್ತು ನೌಕರರು ಕಾರ್ಮಿಕರ ಕಡೆಗೆ ತೋರಿಸುತ್ತಿರುವ ಅಸಡ್ಡೆ, ಅಸಹಕಾರಗಳನ್ನು ಗಮನಿಸಿ ಹಾಗೂ ಇ. ಎಸ್. ಐ. ಯ ಮಂಗಳೂರಿನ, ಬೋಳೂರು, ಬೋಳಾರ ಮತ್ತು ಕುಲಶೇಖರಗಳ ಡಿಸ್ಪೆನ್ಸರಿಗಳ ಡಾಕ್ಟರರು ಮತ್ತು ನೌಕರರು, ಅವರಲ್ಲಿ ಔಷಧಿಗಾಗಿ, ಸರ್ಟಿಫಿಕೇಟುಗಳಿಗಾಗಿ, ಹೋಗುವ ರೋಗಪೀಡಿತ ಕಾರ್ಮಿಕರಿಗೆ ನೀಡುತ್ತಿರುವ ಕಿರುಕುಳಗಳನ್ನು ಗಮನಿಸಿ, ಅದನ್ನು ತೀವ್ರವಾಗಿ ಖಂಡಿಸಿದ, ದ. ಕ.-ಜಿಲ್ಲಾ ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯು ಈ ಅವ್ಯವಸ್ಥೆಯನ್ನು ಈ ಕೂಡಲೇ ಸರಿಪಡಿಸುವಂತೆ, ಸಂಬಂಧಿಸಿದ ಅಧಿಕಾರಸ್ಥರನ್ನು; ಸರ್ಕಾರವನ್ನು, ಒತ್ತಾಯಿಸಲು ನಿರ್ಣಯಿಸಲಾಗಿದೆ.

ಅಲ್ಲದೆ, ತಕ್ಷಣ ಸಂಬಂಧಪಟ್ಟ ಇಲಾಖೆಯು ತಮ್ಮ ಕಾರ್ಮಿಕ ವಿರೋಧಿ ನೀತಿಯನ್ನು ಕೊನೆಗೊಳಿಸದಿದ್ದಲ್ಲಿ, ಉಂಟಾಗಬಹುದಾದ ಯಾವುದೇ ದುಷ್ಪರಿಣಾಮಗಳಿಗೆ, ಇ. ಎಸ್. ಐ. ಇಲಾಖೆಯ ಅಸಡ್ಡೆ ನೀತಿಯೇ ಕಾರಣವಾಗುವುದು ಎಂದು ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ ಸಂಬಂಧಪಟ್ಟ ಇಲಾಖೆಯನ್ನು ಎಚ್ಚರಿಸಿದೆ.

ಪ್ರತ್ಯೇಕ ಕಾರ್ಮಿಕ ನ್ಯಾಯಾಲಯಕ್ಕೆ ಸಿ. ಐ. ಟಿ. ಯು. ಒತ್ತಾಯ

ಚಿಕ್ಕ ಮಗಳೂರು ಜಿಲ್ಲೆಯಲ್ಲಿ ತೋಟ ಕಾರ್ಮಿಕರನ್ನೊಳಗೊಂಡ ಸುಮಾರು ಒಂದು ಲಕ್ಷಕ್ಕಿಂತಲೂ ಹೆಚ್ಚು ಕಾರ್ಮಿಕರು ಕೆಲಸ ಮಾಡಿಕೊಂಡಿರುವರು. ಈ ಕಾರ್ಮಿಕ ಮಾಲೀಕರ ಮಧ್ಯೆ ಉದ್ಭವಿಸುವ ವಿವಾದಗಳನ್ನು ಇತ್ಯರ್ಥ ಮಾಡಲು ಸರ್ಕಾರವು ಮಂಗಳೂರಿನ ಕಾರ್ಮಿಕ ನ್ಯಾಯಾಲಯಕ್ಕೆ ಬಹಳ ಹಿಂದೆಯೇ ಅಧಿಕಾರ ನೀಡಲಾಗಿದೆ. 1983ನೇ ಜನವರಿ ತಿಂಗಳಿನಿಂದಲೇ ಮಂಗಳೂರಿನ ಕಾರ್ಮಿಕ ನ್ಯಾಯಾಲಯದಲ್ಲಿ ನ್ಯಾಯಾಧೀಶರು ಇಲ್ಲದೆ, ವಿವಾದಗಳು ಇತ್ಯರ್ಥವಾಗದೇ ವಿವಾದಕ್ಕೊಳಗಾದ ಕಾರ್ಮಿಕರು ತುಂಬಾ ಕಷ್ಟಕ್ಕೀಡಾಗಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಒಟ್ಟು ಸುಮಾರು ಎಂಟು ನೂರರಷ್ಟು ಕಾರ್ಮಿಕ ವಿವಾದಗಳು ತೀರ್ಮಾನವಾಗದೆ ಮಂಗಳೂರಿನ ಕಾರ್ಮಿಕ ನ್ಯಾಯಾಲಯದಲ್ಲಿ ಉಳಿದಿವೆ ಎಂಬುದಾಗಿ ತಿಳಿದು ಬಂದಿದೆ.

ಆದುದರಿಂದಲೇ ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಸುಮಾರು ಎರಡು ಲಕ್ಷದಷ್ಟು ಕಾರ್ಮಿಕರು ಇರುವುದರಿಂದ ಕಾಫಿ, ಟೀ ಮತ್ತು ರಬ್ಬರ್ ಕೈಗಾರಿಕೆ (ಪ್ಲಾಂಟೇಷನ್ ಇಂಡಸ್ಟ್ರಿ)ಗೆ ಪ್ರತ್ಯೇಕವಾದ ಕಾರ್ಮಿಕ ನ್ಯಾಯಾಲಯವೊಂದನ್ನು ರಚಿಸಿ ಅದರ ಕೇಂದ್ರ ಚಿಕ್ಕಮಗಳೂರಿನಲ್ಲಿ ಇದ್ದು, ಕಾರ್ಯಾರಂಭ ಮಾಡುವಂತೆ ಜಿಲ್ಲೆಯ ಕಾರ್ಮಿಕ ಸಂಘಗಳ (ಸಿ. ಐ. ಟಿ. ಯು) ಪರವಾಗಿ ಜಿ. ಎಸ್. ರಾಘವೇಂದ್ರ ಮತ್ತು ಎ. ಕೆ. ವಿಶ್ವನಾಥ ಅವರು ಸರಕಾರವನ್ನು ಒತ್ತಾಯಿಸಿದ್ದಾರೆ.

ದೊಡ್ಡಬಳ್ಳಾಪುರ

ತಾಲ್ಲೂಕು ರೈತ ಸಮ್ಮೇಳನ

ದಿನಾಂಕ 17-9-84 ರಂದು ದೊಡ್ಡಬಳ್ಳಾಪುರ ಟೌನ್ ಮಹಿಳಾ ಸಮಾಜದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ರೈತ ಸಮ್ಮೇಳನ ನಡೆಯಿತು. ಸುಮಾರು 150 ಪ್ರತಿನಿಧಿಗಳು ವಿವಿಧ ಗ್ರಾಮಗಳಿಂದ ಬಂದಿದ್ದರು. ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಚಿಕ್ಕಹೆಜ್ಜಾಜಿ, ದೊಡ್ಡಬೆಳವಂಗಲ, ತಿಮ್ಮಸಂದ್ರ, ಕೋಡಿಹಳ್ಳಿ, ಗೆಜ್ಜಗದಹಳ್ಳಿ, ಮುಂತಾದ ಗ್ರಾಮಗಳಲ್ಲಿ ವ್ಯಾಪಕ ಸಭೆಗಳನ್ನು ನಡೆಸಲಾಗಿತ್ತು. ಸಮ್ಮೇಳನದ ದಿನ ಪೂರ್ಣ ಮಳೆಯಾಗಿದ್ದರೂ ಪ್ರತಿನಿಧಿಗಳ ಸಂಖ್ಯೆ ಪ್ರೋತ್ಸಾಹದಾಯಕವಾಗಿತ್ತು. ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಹೆಚ್. ಮುಗುವಾಳಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಮಿತಿ ಅಧ್ಯಕ್ಷರಾದ ಸಿ. ರಾಮಭದ್ರಯ್ಯನವರು ಉದ್ಘಾಟನೆ ಮಾಡಿ ತಾಲ್ಲೂಕಿನಲ್ಲಿ 1957 ರಿಂದ ನಡೆದ ಹೋರಾಟಗಳ ಪರಿಚಯವಿತ್ತರು. ಕಿಸಾನ್ ಸಭಾವು ನಿರ್ದೇಶಿಸಿರುವ 12 ಅಂಶಗಳ ಹೋರಾಟಕ್ಕಾಗಿ ಮತ್ತು ಬರಗಾಲ ಪರಿಹಾರ ಒತ್ತಾಯಕ್ಕಾಗಿ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ರಾಜ್ಯಸಮಿತಿ ಸದಸ್ಯರಾದ ಶ್ರೀನಿತ್ಯಾನಂದ ಸ್ವಾಮೀಜಿಯವರು ಭಾಗವಹಿಸಿ ತಾವು ಆಧ್ಯಾತ್ಮಿಕ ಜೀವನದಿಂದ ಪಡೆಯದೆ ಇರುವ ಆನಂದವನ್ನು ರೈತ ಸಂಘಟನೆ, ಹೋರಾಟದ ಮೂಲಕ ಕಂಡುಕೊಂಡಿರುವುದಾಗಿ ತಿಳಿಸಿ, ಕೆಳವರ್ಗದ ಜನತೆ ಭೂಮಿ, ಅನ್ನ, ಉದ್ಯೋಗಗಳಿಗಾಗಿ ಪರಿತಪಿಸುತ್ತಿರುವಾಗ ಅದನ್ನು ಪರಿಹರಿಸಲು ಎಲ್ಲರೂ ಒಟ್ಟುಗೂಡಿ ಸಂಘಟನೆ ಬೆಳೆಸಬೇಕೆಂದು ಕರೆಯಿತ್ತರು. ರೈತನು ಬೆಳೆದ ಬೆಳೆಗೆ ನ್ಯಾಯ ಬೆಲೆ ದೊರೆಯದೆ ಇರುವ ಕಾರಣ ತಮ್ಮ ಭೂಮಿಯನ್ನು ಬೇಕಾದರೂ ತ್ಯಜಿಸಿ ಸಣ್ಣ ನೌಕರಿ ಅಥವಾ ವ್ಯಾಪಾರವನ್ನು ಮಾಡಲು ಇಚ್ಛಿಸುತ್ತಿರುವುದಾಗಿ ತಿಳಿಸಿ ಈ ದಿಸೆಯಲ್ಲಿ ಕೇಂದ್ರ ಸರ್ಕಾರ ನ್ಯಾಯ ಬೆಲೆಗಳನ್ನು ಕೊಡಬೇಕೆಂದು ಒತ್ತಾಯಿಸಿದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ಲಕ್ಕಣ್ಣನವರು ಶುಭವನ್ನು ಕೋರುತ್ತಾ ಈ ಸಮ್ಮೇಳನವು ತಾಲ್ಲೂಕಿನಲ್ಲಿ ಸಂಘಟನೆ ಬೆಳೆಸಲು ಹೊಸ ಹೆಜ್ಜೆಯಾಗಲಿ ಎಂದು ಹಾರೈಸಿದರು.

ಸಮ್ಮೇಳನದಲ್ಲಿ ವರದಿ ಮತ್ತು ಬೇಡಿಕೆಗಳನ್ನು ಕುರಿತು ಚರ್ಚಿಸಲಾಯಿತು.

ಕಾರ್ಮಿಕರ ಪರವಾಗಿ ಎಂ. ಕೃಷ್ಣಮೂರ್ತಿ ಶುಭ ಕೋರಿದರು. ಮೆರವಣಿಗೆಯಲ್ಲಿ ರೈತರು ಮತ್ತು ಕಾರ್ಮಿಕರು ಒಟ್ಟಾಗಿ ಸೇರಿ ಊರಿನ ಮುಖ್ಯ ಬೀದಿಯಲ್ಲಿ ತೆರಳಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು. ಇದರಲ್ಲಿ ಮುಖ್ಯವಾಗಿ ಬರಗಾಲ ಪರಿಹಾರ, ಗ್ರಾಮೀಣ ಪ್ರದೇಶಕ್ಕೆ ಆಹಾರ ಮತ್ತು ಎಣ್ಣೆಗಳು ಕಾಳಸಂತೆಯಲ್ಲಿ ಮಾರಾಟವಾಗದೆ ಒದಗಬೇಕೆಂದೂ, ಲಂಚಕೋರತನ ನಿಲ್ಲಬೇಕೆಂದೂ, ಭೂಮಿಯ ಹಂಚಿಕೆ ತೀವ್ರಗೊಳಿಸಬೇಕೆಂದೂ ಒತ್ತಾಯಿಸಲಾಯಿತು.

ತಾಲ್ಲೂಕು ಸಮಿತಿಗೆ ಟಿ. ಎನ್. ಬಾಲಾಜಿ ಅಧ್ಯಕ್ಷ, ದೊಡ್ಡಯ್ಯ, ಮುನಿಲಿಂಗಯ್ಯ, ನರಸಿಂಹಮೂರ್ತಿ, ಉಪಾಧ್ಯಕ್ಷರಾಗಿಯೂ, ಮುತ್ತನರಸಯ್ಯ, ನಾರಾಯಣಗೌಡ, ಆಂಜನಪ್ಪ ಕಾರ್ಯದರ್ಶಿಗಳಾಗಿಯೂ, ವೆಂಕಟರಾಮು ಖಜಾಂಚಿಯಾಗಿಯೂ, ಮತ್ತು 21 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಸೆ. 29 : ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ

ಸೆಂಟ್ರಲ್ ಕಿಸಾನ್ ಸಭಾದ ಕರೆಯ ಮೇರೆಗೆ ರೈತರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ತಾ. 24-9-84 ರಿಂದ 30-9-84 ರ ವರೆಗೆ ವಾರಾಚರಣೆಯನ್ನು ಇಡೀ ರಾಜ್ಯಾದ್ಯಂತ ನಡೆಸಲಾಗುವುದು. ಇದರ ಅಂಗವಾಗಿ ಸೆ. 17 ರಂದು ದೊಡ್ಡಬಳ್ಳಾಪುರದಲ್ಲಿ ಸೇರಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿಯು ದಿನಾಂಕ 29-9-84 ರಂದು ಬೆಂಗಳೂರು ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ ಸತ್ಯಾಗ್ರಹವನ್ನು ನಡೆಸಲು ತೀರ್ಮಾನಿಸಲಾಗಿದೆ.

ಕಾರ್ಯಕರ್ತರ ಸಭೆಗಳು

ಇದಕ್ಕೆ ಪೂರ್ವಭಾವಿಯಾಗಿ ದಿನಾಂಕ 23 ರಂದು ಕೆಂಗೇರಿ ಹೋಬಳಿ ಕಾರ್ಯಕರ್ತರ ಸಭೆಯನ್ನು ಇಲ್ಲಿನ ಜ್ಯೂನಿಯರ್ ಕಾಲೇಜಿನಲ್ಲಿ ನಡೆಸಲಾಯಿತು. ಸಭೆಯಲ್ಲಿ ಸುಮಾರು 75 ಜನ ಕಾರ್ಯಕರ್ತರು ಭಾಗವಹಿಸಿದ್ದರು. ಕಾ. ವೆಂಕಟಾಚಲಯ್ಯನವರ ಸ್ವಾಗತದೊಂದಿಗೆ ಪ್ರಾರಂಭವಾದ ಸಭೆಯ ಅಧ್ಯಕ್ಷತೆಯನ್ನು ಕಾ. ಲಕ್ಕಣ್ಣನವರು ವಹಿಸಿದ್ದರು. ಕಾ. ಜಗನ್ನಾಥ್ ಮತ್ತು ಕಾ. ಶಾಮಣ್ಣರೆಡ್ಡಿಯವರು ಸಭೆಯಲ್ಲಿ ಮಾತನಾಡಿ 29 ರ ಕಾರ್ಯಕ್ರಮವನ್ನು ಯಶಸ್ವಿ ಮಾಡಬೇಕೆಂದು ಕೋರಿದರು.

ದಿನಾಂಕ 24-9-84 ರಂದು ತಲಗಟ್ಟಪುರದಲ್ಲಿ ಉತ್ತರಹಳ್ಳಿ ಹೋಬಳಿ ಕಾರ್ಯಕರ್ತರ ಸಭೆ ನಡೆಯಿತು. ಸಭೆಯಲ್ಲಿ 40 ಜನ ರೈತರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಲಕ್ಕಣ್ಣನವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಜಗನ್ನಾಥ್, ವಕೀಲರಾದ ಕಾ. ನಾಗಮೋಹನ್ ದಾಸ್ ಮಾತನಾಡಿದರು. ವೆಂಕಟಾಚಲಯ್ಯನವರು ಸಭೆಯನ್ನು ಸ್ವಾಗತಿಸಿದರು.

ಮಾರ್ಕ್ಸ್‌ವಾದ ಮತ್ತು ಭಾರತದಲ್ಲಿ ದೇಶೀಯತೆಯ ಪ್ರಶ್ನೆ

(5ನೇ ಪುಟದಿಂದ)

ಗಳ ಪ್ರಶ್ನೆಯಾಗಲಿ, ಪ್ರಾದೇಶಿಕ ಪ್ರತಿಸ್ಪರ್ಧೆಗಳ ಪ್ರಶ್ನೆಯಾಗಲೀ ಇನ್ಯಾವುದೇ ಪ್ರಶ್ನೆಯ ಮೇಲಾಗಲೀ ಸಂಕುಚಿತವಾದವನ್ನು ಹೊಡೆದೆಬ್ಬಿಸಿದರೆ ಅದು ಎಲ್ಲ ವರ್ಗ ಆಂದೋಲನಗಳ ಎಲ್ಲಾ ಪ್ರಜಾಪ್ರಭುತ್ವ ಆಂದೋಲನಗಳ ಪ್ರಥಮ ಶತ್ರುವಾಗುತ್ತದೆ.

ಈಗ ಪಶ್ಚಿಮ ಬಂಗಾಲ ಹಾಗೂ ತ್ರಿಪುರಾದ ವಿರುದ್ಧ ತೋರಿಸುತ್ತಿರುವ ಭೇದ ಭಾವ ಒಂದು ರಾಜಕೀಯ ಮತ್ತು ವರ್ಗ ಭೇದ-ಭಾವ. ಆಳುವ ಪಕ್ಷ ಎರಡು ಮಂತ್ರಿ ಮಂಡಲಗಳ ಕೆಲಸಕ್ಕೆ ಅಡ್ಡಿ ಉಂಟು ಮಾಡಿ, ಆರ್ಥಿಕ ಅಡಚಣೆ ಒಡ್ಡಿ, ನಿರುದ್ಯೋಗದ ಕಠಿಣತೆಯನ್ನು ಸ್ವಲ್ಪ ಮಟ್ಟಿಗಾದರೂ ಸಡಿಲಿಸ ಬಹುದಾದ ಕೈಗಾರಿಕ ಯೋಜನೆಗಳಿಗೆ ಪರವಾನಗಿ ನಿರಾಕರಿಸಿ ವರ್ಗ ಶಕ್ತಿಗಳನ್ನು, ಪ್ರಜಾಪ್ರಭುತ್ವದ ಶಕ್ತಿಗಳನ್ನು ದಮನ ಮಾಡಬಯಸುತ್ತಿದೆ. ಇದು ಪ್ರಜಾ ಪ್ರಭುತ್ವ ಶಕ್ತಿಗಳ ಮೇಲೆ ನಡೆಯುತ್ತಿರುವ ನಿಷ್ಕರುಣ ಹಲ್ಲೆಗಳು. ಅವುಗಳ ವಿರುದ್ಧ ಹೋರಾಡಲೇ ಬೇಕು. ಅದಕ್ಕೆ ಪ್ರಾದೇಶಿಕ ಪ್ರತಿಸ್ಪರ್ಧೆಯು ಬಣ್ಣ ನೀಡುವುದೆ. ದರೆ ಆಳುವ ಪಕ್ಷದ ಆಟಕ್ಕೆ ಬಲಿ ಬಿದ್ದಂತೆಯೇ.

ಪ್ರಮುಖ ಮಧ್ಯಂತರ ಕ್ರಮ

ಹಲವು ರಾಜ್ಯಗಳಲ್ಲಿ ಹದಗೆಡುತ್ತಿರುವ ಪರಿಸ್ಥಿತಿ ಹಾಗೂ ಉಳಿದೆಡೆ ಅತೃಪ್ತಿಯ ಗುಡುಗಾಟ ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ-ರಾಜ್ಯಗಳ ಸಂಬಧಗಳ ಪ್ರಶ್ನೆ ಭಾರತದ ಐಕ್ಯತೆಯ ಹೋರಾಟದಲ್ಲಿ ವಿಶಿಷ್ಟ ಮಹತ್ವ ಪಡೆಯುತ್ತದೆ. ದೇಶೀಯತೆಯ ಪ್ರಶ್ನೆಯ ನಿಜವಾದ ಹಾಗೂ ಅಂತಿಮ ಪರಿಹಾರ ಸದ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಧ್ಯವಾಗದು ಎಂಬುದು ಬಹಳ ಸ್ಪಷ್ಟ. ಮಾರ್ಕ್ಸ್ ಗಮನಿಸಿದಂತೆ, ಸದ್ಯದ ಆಸ್ತಿ ಸಂಬಂಧಗಳನ್ನು ನಿರ್ನಾಮ ಮಾಡಿದ ಮೇಲಷ್ಟೇ ಪೂರ್ಣ ದೇಶೀಯ ಸಮಾನತೆ ಸ್ಥಾಪಿಸಲು ಸಾಧ್ಯ. ಭಾರತದಲ್ಲಿ ದೇಶೀಯ ಪ್ರಶ್ನೆಯ ಪರಿಹಾರ ಸಮಾಜವಾದೀ ಕ್ರಾಂತಿಗೆ ದಾರಿ ಮಾಡಿ ಕೊಡುವ ಜನತಾ ಪ್ರಜಾ ಪ್ರಭುತ್ವ ಕ್ರಾಂತಿಯ ಹೋರಾಟದ ಅಭಿನ್ನ ಅಂಗ. ಬೂರ್ಜ್ವಾ-ಭೂಮಾಲಕ ಸಂವಿಧಾನಕ್ಕೆ ಕೆಲವು ತಿದ್ದುಪಡಿ ತರುವಂತೆ ಮಾಡುವುದರಿಂದಷ್ಟೇ ಅದನ್ನು ಪೂರ್ಣವಾಗಿ ಸಾಧಿಸಲು ಸಾಧ್ಯವಿಲ್ಲ.

ಆದರೂ ಈ ಸಮಸ್ಯೆಯನ್ನು ಎದುರಿಸಲು ಮಧ್ಯಂತರದ ಕ್ರಮಗಳಿಗಾಗಿ ಹಾಗೂ ಪರಿಹಾರಗಳಿಗಾಗಿ ಹೋರಾಡುವುದು ಅತ್ಯಗತ್ಯ. ಇಂತಹ ಕ್ರಮಗಳು ಎಲ್ಲರನ್ನೂ ಒಂದೆಡೆ ಸೇರಿಸುವ ಬಂಧನವನ್ನು ಬಲಗೊಳಿಸಿ, ಸಮಾನತೆಯತ್ತ ನಡೆಯುತ್ತಿದ್ದೇವೆ ಎಂಬ ಒಂದು ಭಾವನೆಯನ್ನು ಸೃಷ್ಟಿಸಿ, ರಾಷ್ಟ್ರವನ್ನು ಒಗ್ಗಟ್ಟಿನಲ್ಲಿಡಲು ಕಾರ್ಮಿಕ ವರ್ಗಕ್ಕೆ ಅದರ ಪಕ್ಷಕ್ಕೆ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಅನುಕೂಲ ಮಾಡಿಕೊಡುತ್ತವೆ. ಕೇಂದ್ರ—ರಾಜ್ಯ ಸಂಬಂಧಗಳ ಪುನರ್ರಚನೆ ಇಂತಹ ಒಂದು ಕ್ರಮ. ಇದು ಅನ್ಯಾಯದ ಶಕ್ಷಣದ ಮೂಲಗಳನ್ನು ನಿವಾರಿಸಿ ಸಾಮ್ರಾಜ್ಯಶಾಹಿಗಳ ಛಿದ್ರಕಾರೀ ಆಟಗಳನ್ನು ವಿಫಲಗೊಳಿಸಿ ದೇಶದ ಒಗ್ಗಟ್ಟನ್ನು ಕಾಪಾಡಲು ನೆರವಾಗುತ್ತದೆ. ಈ ರೀತಿಯ ಪುನರ್ರಚನೆಯ ಮಹತ್ವವನ್ನು ಯಾರೂ ಕಡೆಗಣಿಸಲು ಸಾಧ್ಯವಿಲ್ಲ.

(ಮುಂದುವರಿಯುವುದು)

ಉಪವಾಸ ಸತ್ಯಾಗ್ರಹ

ಬಿಜಾಪುರ ಮುನಿಸಿಪಲ್ ಕಾಮಗಾರಿ ಯೂನಿಯನಿಗೆ ತಮ್ಮ ಕಛೇರಿಗಾಗಿ ಒಂದು ಕೋಣೆ ಒದಗಿಸಬೇಕೆಂದು ರಾಜ್ಯ ಸರ್ಕಾರ 1981ರಲ್ಲಿ ಮುನಸಿಪಾಲ್ ಕಮಿಶನರಿಗೆ ತಿಳಿಸಿದ್ದರೂ ಕೂಡಾ, ಎರಡುಕಡೆ ತಾತ್ಕಾಲಿಕ ಜಾಲಿಜಾಗಗಳನ್ನೊದಗಿಸಿ ಅನಂತರ ಅವುಗಳನ್ನು ಕಿತ್ತು ಹಾಕಲಾಯಿತು. ಇದನ್ನು ಪ್ರತಿಭಟಿಸಿ ಸರ್ಕಾರದ ಆದೇಶದಂತೆ ಕಾಯಂ ಆಗಿ ಒಂದು ನಿವೇಶನ ಕೊಡಬೇಕೆಂದು ಒತ್ತಾಯಪಡಿಸಿ ಯೂನಿಯನ್ನಿನ ಅಧ್ಯಕ್ಷ ಎಸ್. ಕೆ. ಉಪಾಧ್ಯಾಯ, ಕಾರ್ಯದರ್ಶಿ ವಿ. ಎಂ. ಸೊನ್ನದ. ತಾ. 18 ರಿಂದ ಆಮರಣ ಉಪವಾಸ ಕೈಗೊಂಡಿದ್ದರು. ರೈತ ಸಂಘ ವಿದ್ಯಾರ್ಥಿ ಸಂಘಟನೆ, ರಿಪಬ್ಲಿಕನ್ ಪಕ್ಷಗಳೆಲ್ಲಾ ಈ ಹೋರಾಟಕ್ಕೆ ಬೆಂಬಲ ತೋರಿಸಿ ತಾ. 19 ರಂದು ನಗರಸಭೆಯ ಗೇಟುಗಳನ್ನು ಮುಚ್ಚಿ ಮತ ಪ್ರದರ್ಶನ ನಡೆಸಿ ಘೇರಾವೋ ಹಾಕಿದರು. ಉಪವಾಸದ ಮೂರನೆ ದಿವಸ ಯೂನಿಯನ್ನಿನ ಬೇಡಿಕೆಗೆ ಒಪ್ಪಿ ನಗರಸಭೆ ನಿರ್ಣಯ ಕೈಗೊಂಡಿದ್ದರಿಂದ ಸತ್ಯಾಗ್ರಹ ಬಿಟ್ಟು ಕೊಡಲಾಯಿತು.

★

ಬೀಡಿ ಕಾರ್ಮಿಕರ ಬೃಹತ್ ಪ್ರದರ್ಶನ

10-9-84 ರಂದು ದ. ಕ. ಜಿಲ್ಲಾ ಬೀಡಿ ವರ್ಕರ್ಸ್ ಫೆಡರೇಷನ್ [ಸಿ. ಐ. ಟಿ. ಯು] ಕರೆಯ ಮೇರೆಗೆ ಕುಂದಾಪುರದಲ್ಲಿ ಬೀಡಿ ಕಾರ್ಮಿಕರ ಬೃಹತ್ ಪ್ರದರ್ಶನ ನಡೆಯಿತು.

ಕಳೆದ ಆರು ವರ್ಷಗಳಿಂದ ಪ್ರಾವಿಡೆಂಟ್ ಫಂಡಿನ ಹೆಸರಿನಲ್ಲಿ ಬೀಡಿ ಮಾಲೀಕರಿಂದ ಹಣ ಸಂಗ್ರಹವಾಗುತ್ತಿದ್ದರೂ, ಈ ತನಕ ಬೀಡಿ ಮಾಲಿಕರಾಗಲಿ, ಸರ್ಕಾರದ ಪ್ರಾವಿಡೆಂಟ್ ಫಂಡ್ ಅಧಿಕಾರಿಗಳಾಗಲೀ ಕಾರ್ಮಿಕರಿಗೆ ರಶೀದಿ ಕೊಡಲಿಲ್ಲ. ಚಳುವಳಿಯ ಪರಿಣಾಮವಾಗಿ 1982 ಜೂನ್ 21 ರಂದು ದ. ಕ. ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಮಾತುಕತೆಗಳಲ್ಲಿ ಪ್ರಾವಿಡೆಂಟ್ ಫಂಡ್ ಕಮಿಶನರರೂ, ಜಿಲ್ಲಾ ಪೋಲೀಸ್ ಅಧಿಕಾರಿಯವರೂ, ಜಿಲ್ಲೆಯ ಬೀಡಿ ಮಾಲಿಕರೂ, ಕಾರ್ಮಿಕರ ಪ್ರತಿನಿಧಿಗಳೂ ಭಾಗವಹಿಸಿದ್ದರು. ಬೀಡಿ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ತಾ. 1-8-78 ರಿಂದ ಜ್ಯಾರಿ ಮಾಡಲು ಹಾಗೂ ಕಡಿತ ಮಾಡಿದ ಹಣಕ್ಕೆ ರಶೀದಿ ಕೊಡಲಾಗುವುದು ಎಂದು ಆದ ಒಪ್ಪಂದದ ಶರತ್ತುಗಳನ್ನು ಕಡೆಗಣಿಸಿ ಬೀಡಿ ಮಾಲಕರು ಮತ್ತು ಕಂಟ್ರಾಕ್ಟುದಾರರು ಬೀಡಿ ಕಾರ್ಮಿಕರಿಗೆ ವಂಚಿಸುತ್ತಿದ್ದಾರೆ. ಪ್ರಾವಿಡೆಂಟ್ ಫಂಡ್ ಹಣಕ್ಕೆ ರಶೀದಿ ಕೊಡಬೇಕು ಹಾಗೂ ಕಾನೂನು ರೀತಿಯ ಎಲ್ಲಾ ಸವಲತ್ತುಗಳು ಬೀಡಿ ಕಾರ್ಮಿಕರಿಗೆ ಸಿಗಬೇಕು ಎನ್ನುವ ಬೇಡಿಕೆಗಳನ್ನೊಳಗೊಂಡ ಒಂದು ಮನವಿಯನ್ನು ತಹಸಿಲ್ದಾರರಿಗೆ ಅರ್ಪಿಸಲಾಯಿತು.

ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ವಿ. ಮಹಾಬಲವರು ಸ್ವಾಗತಿಸಿ ಬೇಡಿಕೆಗಳ ಬಗ್ಗೆ ವಿವರಣೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಅಬ್ರಹಾಂ ಕರ್ಕಡರವರು ವಹಿಸಿದರು. ಸಭೆಯನ್ನುದ್ದೇಶಿಸಿ ಕೆ. ಶಂಕರವರು ಮತ್ತು ಸಿ. ನಾರಾಯಣ್ ಮಾತನಾಡಿ ಸಂಘಟನೆ ಬಲಪಡಿಸಿ ಅನ್ಯಾಯ — ವಂಚನೆಯ ವಿರುದ್ಧ ತೀವ್ರ ಹೋರಾಟ ಮಾಡಬೇಕೆಂದರು.

ರಾಯಚೂರಿನಲ್ಲಿ ಮಹಿಳಾ ಸಮಾವೇಶ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಯಚೂರು ಜಿಲ್ಲಾ ಪ್ರಥಮ ಸಮಾವೇಶವು ಸೆಪ್ಟೆಂಬರ್ 15, 16 ರಂದು ನಗರದ ಗಂಜ್ ಕಲ್ಯಾಣ ಮಂಟಪದಲ್ಲಿ ಅಶೋಕ ಲತಾ ಜೈನ್ ಹಾಲ್‌ನಲ್ಲಿ ನಡೆಯಿತು. ಸಮಾವೇಶದ ಉದ್ಘಾಟನೆಯನ್ನು ಅ. ಭಾ. ಪ್ರ. ಸಂಘಟನೆಯ ಪ್ರಧಾನ ಕಾರ್ಯದರ್ಶಿ ಸಂಸತ್ ಸದಸ್ಯೆ ಶ್ರೀಮತಿ ಸುಶೀಲಾ ಗೋಪಾಲನ್ ಮಾಡಿದರು. ತಮ್ಮ ಉದ್ಘಾಟನಾ ಭಾಷಣ ಮಾಡುತ್ತಾ ಅವರು ಸರ್ಕಾರ ಹಾಗೂ ಸಮಾಜ ಮಹಿಳೆಯರನ್ನು ದ್ವಿತೀಯ ದರ್ಜೆಯ ಪ್ರಜೆಗಳನ್ನಾಗಿ ಕಾಣುತ್ತಿದೆ. ದೇಶದ 33 ಕೋಟಿ ಮಹಿಳೆಯರ ಪೈಕಿ 25 ಕೋಟಿ ಮಹಿಳೆಯರು ಅನಕ್ಷರಸ್ಥರಾಗಿದ್ದು ಅವರಿಗೆ ದೇಶದ ಆಗುಹೋಗುಗಳ ಬಗ್ಗೆ ಕಲ್ಪನೆಯೇ ಇಲ್ಲ. ಪಂಚವಾರ್ಷಿಕ ಯೋಜನೆಗಳಲ್ಲಾಗಲಿ, ರಾಷ್ಟ್ರೀಯ ಯೋಜನೆಗಳಲ್ಲಾಗಲಿ, ಮಹಿಳೆಯರ ಅಭಿವೃದ್ಧಿಗೆ ಯಾವ ಕಾರ್ಯಕ್ರಮ ಹಾಕಿಕೊಂಡಿಲ್ಲ ಎಂದು ದೂರಿ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರ ಸ್ಥಿತಿ ದಾರುಣವಾಗಿದೆ ಎಂದು ಅದರಲ್ಲೂ ದುಡಿಯುವ ಮಹಿಳೆಯರು ಹೆಚ್ಚು ಸಂಸಾರಿಕ ಒತ್ತಡಗಳಿಂದ ಬಳಲುತ್ತಿದ್ದಾರೆ. ಅವುಗಳನ್ನು ಹಗುರಗೊಳಿಸುವ ಯಾವ ಸೌಕರ್ಯವೂ ನಮ್ಮ ದೇಶದಲ್ಲಿ ಇಲ್ಲ ಎಂದು ಹೇಳಿದರು. ಸೆಕ್ಸ್ ಡಿಟರ್‌ಮಿನೇಷನ್ ಟೆಸ್ಟ್ ಮೂಲಕ ಹೆಣ್ಣು ಭೂಮಿಯ ಮೇಲೆ ಹುಟ್ಟುವುದನ್ನೆ ತಡೆಗಟ್ಟಲಾಗುತ್ತಿದೆಂದೂ ಮಹಿಳೆಯರನ್ನು ಕುಟುಂಬದ ಸೀಮಿತ ವಲಯದಿಂದ ಹೊರತಂದು ರಾಷ್ಟ್ರದ ಉತ್ಪಾದನ ಪ್ರಕ್ರಿಯೆಯಲ್ಲಿ ತೊಡಗಿಸಬೇಕಾದ ಅಗತ್ಯವಿದೆಂತಲೂ, ಯಾಂತ್ರೀಕರಣದಿಂದಾಗಿ ಲಕ್ಷಾಂತರ ಮಹಿಳೆಯರು ನಿರುದ್ಯೋಗಿಗಳಾಗುತ್ತಿದ್ದು, ಅದನ್ನು ತಡೆಗಟ್ಟಿ ಸಮಾಜವಾದಿ ರಾಷ್ಟ್ರಗಳಲ್ಲಿರುವಂತೆ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಬೇಕೆಂದು ಆಗ್ರಹಪಡಿಸಿದರು. ಈ ಎಲ್ಲ ಸಮಸ್ಯೆಗಳಿಗಾಗಿ ಮಹಿಳೆಯರನ್ನು ಸಂಘಟಿಸಿ ಹೋರಾಡಬೇಕೆಂದು ಕರೆ ನೀಡಿದರು. ನಂತರ ಶ್ರೀಮತಿ ಲಲಿತಾ ಬಿದಿರೆ ಅವರು ವರದಕ್ಷಿಣೆ ಪಿಡುಗಿನ ಕುರಿತು ಪ್ರಬಂಧ ಮಂಡಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶೀಲಾ ತಿವಾರಿ ಅವರು ಮಹಿಳೆಯರ ದಾಸ್ಯಕ್ಕೆ ಕಾರಣವಾದ ಪರಿಸರ ಪ್ರಭಾವದ ಮೌಲ್ಯಗಳನ್ನು ಧಿಕ್ಕರಿಸಿ ಹೋರಾಟದೊಂದಿಗೆ ವಿಚಾರಧಾರೆಯನ್ನು ಬದಲಿಸಿಕೊಳ್ಳಬೇಕೆಂದು ಕರೆ ನೀಡಿದರು.

ಆರಂಭದಲ್ಲಿ ಸಂಘಟನೆಯ ಕಾರ್ಯಕರ್ತರಿಂದ ಹಾಡಿನ ಕಾರ್ಯಕ್ರಮ ನಡೆಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಕರುಣಾ ಕುಲಕರ್ಣಿ ಅವರು ಸ್ವಾಗತಭಾಷಣ ಮಾಡಿದರು. ಭೀಮಯ್ಯ ಎಂಬ ಕಾರ್ಮಿಕ ಮಹಿಳೆಯಿಂದ ಧ್ವಜಾರೋಹಣ ನಡೆಸಿ ಮಹಿಳೆಯರ ಹೋರಾಟಕ್ಕೆ ಅಪ್ರತಿಮ ಕಾಣಿಕೆನೀಡಿ ಹುತಾತ್ಮರಾದ ಮಹಿಳೆಯರ ಗೌರವಾರ್ಥವಾಗಿ ಎರಡು ನಿಮಿಷದ ಮೌನವನ್ನು ಆಚರಿಸಲಾಯಿತು. ಶ್ರೀಮತಿ ಸರೋಜಾ ಶಹಾ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. 500 ಕ್ಕೂ ಹೆಚ್ಚು ಪ್ರೇಕ್ಷಕರಿದ್ದರು.

ಸಮ್ಮೇಳನದಲ್ಲಿ ಕೆಳಕಂಡ ಜಿಲ್ಲಾ ಸಮಿತಿ ರಚಿಸಲಾಯಿತು.

ಅಧ್ಯಕ್ಷರು ಶಾಮಲಾ ಪೂಜಾರ್ ಉಪಾಧ್ಯಕ್ಷರು ಮೈತ್ರಿ ಪಾಟೀಲ್ [ಜಾಲಹಳ್ಳಿ] ಪ್ರಧಾನ ಕಾರ್ಯದರ್ಶಿ ಹರಿಣಿ ಕಾಕ್ಕೇರಿ ಸಹ ಕಾರ್ಯದರ್ಶಿ ಗಿರಿಜಾ (ಸಿಂಧನೂರ್) ಖಜಾಂಚಿ ಸುಲೋಚನಾ (ರಾಯಚೂರು).

ತುಂಗಾ, ಅಕ್ತರ್ ಫಾತಿಮಾ, ತಸ್ಲಿಮ ಸುಲ್ತಾನ, ನನ್ನಿಬೇಗಂ, ಇವರುಗಳು ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದು ಇನ್ನು 8 ಸ್ಥಳಗಳನ್ನು ಖಾಲಿ ಬಿಟ್ಟಿದ್ದು, ಅವುಗಳನ್ನು ತುಂಬಿಕೊಳ್ಳುವ ಅಧಿಕಾರ ಜಿಲ್ಲಾ ಸಮಿತಿಗೆ ಕೊಟ್ಟಿದೆ.

ಚೀನಾ ಜನತೆಗೆ ಹಾರ್ದಿಕ ಶುಭಾಶಯಗಳು

(1ನೇ ಪುಟದಿಂದ)

ಚೀನಾದ ಕಮ್ಯೂನಿಸ್ಟ್ ಪಾರ್ಟಿಯು ಮಾರ್ಕ್ಸ್‌ವಾದಿ ಸಿದ್ಧಾಂತದ ಆಧಾರದಲ್ಲಿ ಅಲ್ಲಿಯ ವಾಸ್ತವ ಪರಿಸ್ಥಿತಿಯನ್ನು ಅಭ್ಯಾಸಮಾಡಿ ಸರಿಯಾದ ಧೋರಣೆಯನ್ನು ಅನುಸರಿಸಿಕೊಂಡು ಬಂದುದರಿಂದ ಯಶಸ್ವಿಯಾಗಿ ಕ್ರಾಂತಿಯನ್ನು ಸಾಧಿಸಿ ಮುಂದುವರಿಯಲು ಸಾಧ್ಯವಾಯಿತು. ಅವರು ನಡೆಸಿದ ಹೋರಾಟವು ಅದ್ಭುತವಾದುದು.

ಚೀನಾದ ಕಮ್ಯೂನಿಸ್ಟ್ ಪಾರ್ಟಿಯು ಸಾಂಸ್ಕೃತಿಕ ಕ್ರಾಂತಿಯ ಕಾಲದಲ್ಲಿ ನಡೆದ ತಪ್ಪುಗಳನ್ನು ತಿದ್ದಿಕೊಂಡು ಈಗ ರಭಸದಿಂದ ಮುಂದುವರಿಯುತ್ತಿದೆ. ದಿಟ್ಟ ಹೆಜ್ಜೆಗಳನ್ನು ಅದು ತೆಗೆದು ಕೊಳ್ಳುತ್ತಿದೆ.

ನಮ್ಮ ಪಾರ್ಟಿಗೂ ಚೀನಾ ಪಾರ್ಟಿಗೂ ಈಗ ಪರಸ್ಪರ ಸೋದರ ಸಂಬಂಧ ಬೆಳೆದಿವೆ ಕೆಲವು ವಿಷಯಗಳಲ್ಲಿ ನಮಗೂ ಅವರಿಗೂ ಭಿನ್ನಾಭಿಪ್ರಾಯ ವಿದ್ದರೂ ನಮ್ಮ ಸೌಹಾರ್ದತೆಗೆ ಅವು ಅಡ್ಡಿ ಬರಲಾರವು. ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಐಕ್ಯತೆಗೂ ಸಾಮ್ರಾಜ್ಯಶಾಹಿಗಳ ಯುದ್ಧಖೋರ ನೀತಿಯ ವಿರುದ್ಧ ಹೋರಾಟಕ್ಕೂ ಒಂದಾಗಿ ದುಡಿಯಲು ಸಾಧ್ಯವಾಗಿದೆ.

ಸೋವಿಯತ್ ಮತ್ತು ಚೀನಾ ಪಾರ್ಟಿಗಳ ಮಧ್ಯೆ ತಲೆದೋರಿದ್ದ ವಿರಸವು ಕಡಿಮೆಯಾಗುತ್ತಾ ಈಗ ಪರಸ್ಪರ ದೂಷಣೆಯು ನಿಂತಿದೆ. ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಪ್ರಯತ್ನ ನಡೆದಿದೆ.

ಭಾರತಕ್ಕೂ ಚೀನಾಕ್ಕೂ ಹಿಂದಿನಿಂದಲೂ ಮೈತ್ರಿಯಿದ್ದದ್ದಲ್ಲದೆ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನಿಕಟವಾದ ಸೌಹಾರ್ದ ಸಂಬಂಧಗಳು ಬೆಳೆದಿವೆ. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ನಡುವೆ ಗಾಢವಾದ ಮೈತ್ರಿಯು ಬೆಳೆಯುತ್ತಿರುವಾಗ ಅಮೇರಿಕನ್ ಸಾಮ್ರಾಜ್ಯಶಾಹಿಯ ಪಿತೂರಿಯ ಪರಿಣಾಮವಾಗಿ ತೀವ್ರ ಭಿನ್ನಾಭಿಪ್ರಾಯಗಳು ಬಂದು ನಮ್ಮ ಬಾಂಧವ್ಯಕ್ಕೆ ಧಕ್ಕೆ ಬಂತು. ಆದರೆ ಈಗ ಎರಡೂ ದೇಶಗಳು ಎಲ್ಲಾ ಪ್ರಶ್ನೆಗಳನ್ನು ಮಾತುಕತೆಗಳ ಮೂಲಕ ಬಗೆ ಹರಿಸಲು ಸಂಧಾನ ನಡೆಸುತ್ತಿರುವುದು ಸ್ವಾಗತಾರ್ಹವಾದುದು. ಇದು ಯಶಸ್ವಿಯಾಗಲೆಂದು ನಾವು ಹಾರೈಸುತ್ತೇವೆ.

ನಮ್ಮ ಪಾರ್ಟಿಯು ಚೀನಾದ ಸರ್ಕಾರಕ್ಕೂ, ಜನತೆಗೂ, ಅಲ್ಲಿಯ ಕಮ್ಯೂನಿಸ್ಟ್ ಪಾರ್ಟಿಗೂ ಹೃತ್ಪೂರ್ವಕ ಶುಭಾಶಯವನ್ನು ಕೋರುತ್ತದೆ. ಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಿ ಮುಂದುವರಿಯಲೆಂದು ನಾವು ಹಾರೈಸುತ್ತೇವೆ.

ಚೀನಾದ ಕ್ರಾಂತಿ ಚಿರಾಯುವಾಗಲಿ
ಭಾರತ—ಚೀನಾ ಮೈತ್ರಿ ಚಿರಾಯುವಾಗಲಿ

ರಿಕ್ಷಾಚಾಲಕರ ರಾಜ್ಯ ಮಟ್ಟದ ಸಮಾವೇಶ

ಕರ್ನಾಟಕ ರಾಜ್ಯದ ಎಲ್ಲಾ ರಿಕ್ಷಾ ಚಾಲಕರ ಮತ್ತು ಮಾಲಕರ ಸಮಾವೇಶವನ್ನು ಮಂಗಳೂರಿನಲ್ಲಿ ತಾ. 5-10-84 ರಂದು ಮಧ್ಯಾಹ್ನ 3 ಕ್ಕೆ ಡಾನ್ ಬೋಸ್ಕೊ ಹಾಲಿನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಈ ಸಮಾವೇಶದಲ್ಲಿ ರಿಕ್ಷಾ ಚಾಲಕರು ಮತ್ತು ಮಾಲಕರು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚಿಸಿ ನಿರ್ಣಯ ತೆಗೆದು ಕೊಳ್ಳಲಾಗುವುದು.

ಎಲ್ಲಾ ರಿಕ್ಷಾ ಚಾಲಕರು ಮಾಲಕರು ಮತ್ತು ಸಾರ್ವಜನಿಕರು ಈ ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ದ. ಕ. ಜಿಲ್ಲ ಆಟೋ ರಿಕ್ಷಾ ಚಾಲಕರ ಸಂಘದ ಕಾರ್ಯದರ್ಶಿಯವರು ವಿನಂತಿಸಿದ್ದಾರೆ.

ಚುನಾವಣೆಗೆ ಎಸ್.ಎಫ್.ಐ. ಆಗ್ರಹ

ದ.ಕ ಜಿಲ್ಲೆಯ,ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜು, ಬೆಳ್ತಂಗಡಿ ಸರಕಾರಿ ಕಿರಿಯ ಕಾಲೇಜು ಹಾಗೂ ಸುಳ್ಯದ ನೆಹರು ಮೆಮೋರಿಯಲ್ ಕಾಲೇಜುಗಳ ಆಡಳಿತ ವರ್ಗವು ಹಾಗೂ ಪ್ರಿನ್ಸಿಪಾಲರು, ಹಲವು ಜಾತೀಯ ಶಕ್ತಿಗಳ ಒತ್ತಡಕ್ಕೆ ಮಣಿದು ಏಕಾಏಕಿಯಾಗಿ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ರದ್ದುಗೊಳಿಸಿದ್ದಕ್ಕೆ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್ ಎಫ್ ಐ) ದ.ಕ. ಜಿಲ್ಲಾ ಸಮಿತಿ ಖಂಡಿಸಿತಲ್ಲದೆ, ಈ ಕಾಲೇಜುಗಳಲ್ಲಿ ತಕ್ಷಣ ಚುನಾವಣೆ ನಡೆಸುವಂತೆ ಒತ್ತಾಯಿಸಿದೆ. ಜಿಲ್ಲೆಯ ಖಾಸಗಿ ಕಾಲೇಜುಗಳ ಆಡಳಿತ ವರ್ಗವು ಡಿಸೆಂಬರ್ ತಿಂಗಳಿನವರೆಗೆ ಶುಲ್ಕ ವಿನಾಯತಿಗೆ ಅರ್ಹರಾದ ವಿದ್ಯಾರ್ಥಿಗಳಿಂದ ಶುಲ್ಕವನ್ನು ವಸೂಲಿ ಮಾಡುವುದಿಲ್ಲವೆಂದು ಜಿಲ್ಲಾಧಿಕಾರಿ ಕಛೇರಿಯಲ್ಲಿ ನಡೆದ ಮಾತುಕತೆಯಲ್ಲಿ ಭರವಸೆ ನೀಡಿದರೂ, ಹಲವು ಖಾಸಗಿ ಕಾಲೇಜುಗಳಲ್ಲಿ ಅರ್ಹ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡುತ್ತಿರುವುದನ್ನು ಎಸ್.ಎಫ್.ಐ. ವಿರೋಧಿಸಿದೆ. ಒರಿಸ್ಸಾದ ಬರ್ಲಾ ನಗರದಲ್ಲಿ ನಡೆದ ವಿದ್ಯಾರ್ಥಿಗಳ ಹತ್ಯೆಯನ್ನು ಖಂಡಿಸಿ ಎಸ್. ಎಫ್. ಐ ಜಿಲ್ಲಾ ಸಮಿತಿ ನಿರ್ಣಯವನ್ನು ಅಂಗೀಕರಿಸಿತು ಎಂಬುದಾಗಿ ಎಸ್.ಎಫ್.ಐ. ದ ಐ. ನ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ನಟೇಕರ್ ಮತ್ತು ಅಧ್ಯಕ್ಷರಾದ ಕೆ. ವಿಶ್ವನಾಥ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ವಿವಾಹ

ದಿನಾಂಕ 6-9-84 ರಂದು ನಡೆದ ಕಾಂ. ರಾಜ ಗೋಪಾಲ್ ರವರ ಪುತ್ರ ಸಾಕ್ರೆಟಿಸ್ ಮತ್ತು ಕಾಂ. ದೇವರಾಜರ ಪುತ್ರಿ ವಿಜಯರವರ ವಿವಾಹದ ನೆನಪಿನ ಕಾಣಿಕೆಯಾಗಿ ಐಕ್ಯರಂಗಕ್ಕೆ 25 ರೂಗಳನ್ನು ಕೊಟ್ಟಿದ್ದಾರೆ. ನವ ದಂಪತಿಗಳಿಗೆ ಐಕ್ಯರಂಗದ ಶುಭಾಶಯಗಳು.

ಬೆಂಗಳೂರು

ಉಪವಾಸ ಸತ್ಯಾಗ್ರಹ ಮುಕ್ತಾಯ

ನಗರ ಸಭೆಯವರು ವಸೂಲಿ ಮಾಡುತ್ತಿರುವ ಆಟೋ ರಿಕ್ಷಾ ಶುಲ್ಕವನ್ನು ರದ್ದು ಮಾಡಬೇಕೆಂದು ನಗರ ಸಭೆಯ ಆವರಣದಲ್ಲಿ ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್‌ನ ಪ್ರಕಾರ್ಯದರ್ಶಿ ಎ.ವಿ ರಮೇಶ್‌ರವರು ಅನಿರ್ದಿಷ್ಟ ಕಾಲ ಉಪವಾಸಸತ್ಯಾಗ್ರಹವನ್ನು ತಾ: 21·9·84 ರಂದು ಪ್ರಾರಂಭಿಸಿದರು. ಈ ಸತ್ಯಾಗ್ರಹ ಶಿಬಿರಕ್ಕೆ 24-9-84 ರಂದು ಬೆಳಗ್ಗೆ 11 ಗಂಟೆಗೆ ನಗರಾಭಿವೃದ್ಧಿ ಸಚಿವರಾದ ಮಾನ್ಯ ಶ್ರೀ ವಿ. ಎಸ್. ಕೃಷ್ಣಯ್ಯರ್‌ರವರು ಭೇಟಿ ಕೊಟ್ಟು ನ್ಯಾಯಯುಕ್ತವಾಗಿರುವ ಬೇಡಿಕೆಯನು ಈಡೇರಿಸಿಕೊಡುವುದಾಗಿ ಭರವಸೆ ಕೊಟ್ಟು ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದ ಪ್ರಧಾನ ಕಾರ್ಯದರ್ಶಿಗಳಾದ ಎ. ವಿ. ರಮೇಶ್‌ರವರಿಗೆ ಎಳ ನೀರನ್ನು ನೀಡಿ ಸತ್ಯಾಗ್ರಹ ಮುಕ್ತಾಯಗೊಳಿಸಿದರು.

ಐಕ್ಯರಂಗಕ್ಕೆ ಚಂದಾದಾರರಾಗಿರಿ

Printed & Published by P Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560052 Editoral and managerial office, L-56, K. V. Temple Street, Sultanpet. B-53 Phone : 24154
Editor : P. Ramachandra Rao
Managing Editor : N. K. Upadhyaya